ಸಂಪುಟ 01 | ಸಂಚಿಕೆ 192 | ಭಾನುವಾರ 07 ಜೂನ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು


# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com


## ಈ ದಿನದ ವಿಶೇಷ

**1) ವಿಶ್ವ ಆಹಾರ ಸುರಕ್ಷತಾ ದಿನ**

ಪ್ರತಿ ವರ್ಷ ಜೂನ್ 7 ರಂದು ವಿಶ್ವದಾದ್ಯಂತ ವಿಶ್ವ ಆಹಾರ ಸುರಕ್ಷತಾ ದಿನವನ್ನು ಆಚರಿಸಲಾಗುತ್ತದೆ. ಅಸುರಕ್ಷಿತ ಆಹಾರದಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಆಹಾರ ಪದ್ಧತಿಯನ್ನು ಸುಧಾರಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

**2) ಬಿ ಡಿ ಜತ್ತಿ ಪುಣ್ಯ ಸ್ಮರಣೆ**

ಭಾರತದ ಮಾಜಿ ಉಪರಾಷ್ಟ್ರಪತಿ ಮತ್ತು ಹಂಗಾಮಿ ರಾಷ್ಟ್ರಪತಿಯಾಗಿದ್ದ ಬಸಪ್ಪ ದಾನಪ್ಪ ಜತ್ತಿ (ಬಿ.ಡಿ. ಜತ್ತಿ) ಅವರ ಪುಣ್ಯಸ್ಮರಣೆಯು ಪ್ರತಿ ವರ್ಷ ಜೂನ್ 7 ರಂದು ಆಚರಿಸಲಾಗುತ್ತದೆ. 1912ರ ಸೆಪ್ಟೆಂಬರ್ 10ರಂದು ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಸಾವಳಗಿಯಲ್ಲಿ ಜನಿಸಿದ್ದ ಇವರು, 2002ರ ಜೂನ್ 7ರಂದು ನಿಧನರಾದರು.

## ಸುಭಾಷಿತ

ಸಮಯವೇ ಶ್ರೇಷ್ಠ ಶಿಕ್ಷಕ, ಮಾತನಾಡದೆಯೇ ಅದು ನಮಗೆ ಎಲ್ಲವನ್ನೂ ಕಲಿಸುತ್ತದೆ!

...ಸ್ವಾಮಿ ವಿವೇಕಾನಂದರು

## ಎರಡನೇ ಹಂತದ ಸಚಿವ ಸಂಪುಟದಲ್ಲಿ ಕಂಪ್ಲಿ ಶಾಸಕಗೆ ಸಚಿವ ಸ್ಥಾನ ನೀಡಬೇಕು

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಕಂಪ್ಲಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳೊಂದಿಗೆ ಜನರ ಮನೆ ಮಾತಾಗಿರುವ ಶಾಸಕ ಜೆ. ಎನ್.ಗಣೇಶ್‌ಗೆ ಎರಡನೇ ಹಂತದ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಕರ್ನಾಟಕ ಸೌಹಾರ್ದ ವೇದಿಕೆ ವೇದಿಕೆಯ ರಾಜ್ಯ ಉಪಾಧ್ಯಕ್ಷ ಶಬ್ಬೀರ್ ಹೆಚ್ ಒತ್ತಾಯಿಸಿದರು ಅವರು ಪಟ್ಟಣದಲ್ಲಿ ಪತ್ರಿಕಾ ಪ್ರಕಟಣೆ ನೀಡಿ ಮಾತನಾಡಿ,**



ವಿಜಯನಗರ(ಹೊಸಪೇಟೆ) ಸೇರಿದಂತೆ ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಕಂಪ್ಲಿ ಶಾಸಕ ಜೆ.ಎನ್.ಗಣೇಶ ಅತಿ ಹೆಚ್ಚಿನ ಅಭಿವೃದ್ಧಿ ಮಾಡುವ ಜೊತೆಗೆ ಜಿಲ್ಲೆಯ ಜನರ ಮನದಲ್ಲಿ ನೆಲೆಸಿದ್ದಾರೆ. ಮೊದಲಿಗೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ಜೊತೆಗೆ ರೈತಾಪಿ ವರ್ಗ ಮತ್ತು ಕಾರ್ಮಿಕರ ಬಗ್ಗೆ ಅತಿ ಹೆಚ್ಚಿನ ಒಲವು ತೋರಿದ್ದಾರೆ. ಒಟ್ಟಾರೆಯಾಗಿ ಯುವ ನಾಯಕ ಉತ್ತರ ಕರ್ನಾಟಕ ಭಾಗದ ಅಹಿಂದ ಸಮುದಾಯಗಳ ಸಮಾನತೆಗಾಗಿ ಶ್ರಮಿಸುತ್ತಿದ್ದಾರೆ. ಜಾತ್ಯಾತೀತ ಮನೋಭಾವನೆಯೊಂದಿಗೆ ಸರ್ವರಲ್ಲೂ ಪ್ರೀತಿ, ವಿಶ್ವಾಸದೊಂದಿಗೆ ಸರಳ 4ನೇ ಪುಟಕ್ಕೆ

# ಬಗೆಹರಿಯದ ಖಾತೆ ಬಿಕ್ಕಟ್ಟು

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಖಾತೆ ಹಂಚಿಕೆ ಬಗ್ಗೆ ಅಸಮಾಧಾನಗೊಂಡಿರುವ ಸಚಿವ ರಾಮಲಿಂಗಾರೆಡ್ಡಿಯವರ ಮನವೊಲಿಸಿ ಅವರ ಮುನಿಸನ್ನು ತಣಿಸುವ ಪ್ರಯತ್ನಗಳು ನಡೆದಿದ್ದು, ಖಾತೆ ಹಂಚಿಕೆ ಬಿಕ್ಕಟ್ಟು ಇನ್ನು ಸುಖಾಂತ್ಯ ಕಂಡಿಲ್ಲ.**

ಬೆಂಗಳೂರು ನಗರಾಭಿವೃದ್ಧಿ ಖಾತೆಗೆ ಪಟ್ಟು ಹಿಡಿದು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ರಾಮಲಿಂಗಾರೆಡ್ಡಿಯವರ ಮನವೊಲಿಸುವ ಪ್ರಯತ್ನವನ್ನು ಕಾಂಗ್ರೆಸ್ ನಾಯಕರು ನಡೆಸಿದ್ದು, ಸಚಿವ ರಾಮಲಿಂಗಾರೆಡ್ಡಿಯವರು ಮಾತ್ರ ತಮ್ಮ ನಿಲುವಿಗೆ ಬಿಗಿಯಾಗಿ ಅಂಟಿಕೊಂಡಿದ್ದಾರೆ. ಬೆಂಗಳೂರಿನ ಜಯನಗರದ ಖಾಸಗಿ ಹೋಟೆಲ್‌ನಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರು ನಿನ್ನೆ ತಡರಾತ್ರಿಯವರೆಗೂ ರಾಮಲಿಂಗಾರೆಡ್ಡಿಯವರ ಜತೆ ಚರ್ಚೆ ನಡೆಸಿ ಅವರ ಮನವೊಲಿಸುವ ಪ್ರಯತ್ನ ನಡೆಸಿದ ಬೆನ್ನಲ್ಲೆ ಇಂದು ಬೆಳಿಗ್ಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ರಾಮಲಿಂಗಾರೆಡ್ಡಿಯವರ ಜತೆ ಸುಮಾರು ಅರ್ಧಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆಸಿ ರಾಜೀನಾಮೆಯನ್ನು ವಾಪಸ್





ಪಡೆಯುವಂತೆ ಮನವಿ ಮಾಡಿದ್ದಾರೆ.

ಬೆಂಗಳೂರು ನಗರಾಭಿವೃದ್ಧಿ ಖಾತೆಯನ್ನು ನೀಡುವ ಸಂಬಂಧ ಹೈಕಮಾಂಡ್ ಬಳಿ ಮಾತನಾಡುತ್ತೇವೆ. ಒಂದು ವೇಳೆ ಹೈಕಮಾಂಡ್ ಒಪ್ಪದಿದ್ದರೆ ಬೇರೆ ಖಾತೆಯನ್ನು ನೀಡುತ್ತೇವೆ. ಅದಕ್ಕೆ ಒಪ್ಪಿಕೊಳ್ಳಿ ಎಂದು ರಣದೀಪ್ ಸಿಂಗ್ ಸುರ್ಜೇವಾಲ ಮತ್ತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಮಲಿಂಗಾರೆಡ್ಡಿಯವರಿಗೆ ಮನವಿ ಮಾಡಿದ್ದಾರೆ. ಹಾಗಾಗಿ ಖಾತೆ ಹಂಚಿಕೆ ಬಿಕ್ಕಟ್ಟು ಪರಿಹಾರ ಈಗ ಹೈಕಮಾಂಡ್ ತೀರ್ಮಾನದ ಮೇಲೆ ನಿಂತಿದೆ. ಬೆಂಗಳೂರು ನಗರಾಭಿವೃದ್ಧಿ ಖಾತೆ ಬಿಟ್ಟು ಬೇರೆ ಖಾತೆ ನೀಡಿದರೆ ಅದಕ್ಕೆ ರಾಮಲಿಂಗಾರೆಡ್ಡಿಯವರು ಒಪ್ಪುವ ಸಾಧ್ಯತೆ ಕಡಿಮೆ ಇದೆ. ಹಾಗಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ರಣದೀಪ್ ಸಿಂಗ್ ಸುರ್ಜೆವಾಲ ಅವರು ಹೈಕಮಾಂಡ್‌ನ್ನು ಯಾವ ರೀತಿ ಮನವೊಲಿಸುತ್ತಾರೆ ಎಂಬುದು ಈಗ ಕುತೂಹಲ ಮೂಡಿಸಿದೆ.

ಇಂದು ಬೆಳಿಗ್ಗೆ ರಣದೀಪ್ ಸಿಂಗ್ ಸುರ್ಜೇವಾಲರವರ ಜತೆ ಚರ್ಚೆ ನಡೆಸಿದ ರಾಮಲಿಂಗಾರೆಡ್ಡಿಯವರು ನಾನು ವಿದ್ಯಾರ್ಥಿ ಕಾಂಗ್ರೆಸ್‌ನಲ್ಲಿದ್ದಾಗಿನಿಂದಲೂ ಬೆಂಗಳೂರಿನಲ್ಲಿ ರಾಜಕಾರಣ ಮಾಡಿದ್ದೇನೆ. ಬೆಂಗಳೂರನ್ನು ಚೆನ್ನಾಗಿ ಬಲ್ಲೆ. ನನಗೆ ಬೆಂಗಳೂರು ಅಭಿವೃದ್ಧಿ ಕೊಡಿ, ಒಳ್ಳೆಯ ಕೆಲಸ ಮಾಡಿ ತೋರಿಸುತ್ತೇನೆ ಎಂದು ಹೇಳಿದ್ದಾರೆ. ಖಾತೆ ಹಂಚಿಕೆ ಹೈಕಮಾಂಡ್ ತೀರ್ಮಾನವಾಗಿದೆ. ಹಾಗಾಗಿ ಹೈಕಮಾಂಡ್ ಮಾತನ್ನು ಮೀರುವಂತಿಲ್ಲ. ನಾವು ಹೈಕಮಾಂಡ್ ಜತೆ ಮಾತನಾಡುತ್ತೇವೆ. ಒಂದು ವೇಳೆ ಹೈಕಮಾಂಡ್ ಒಪ್ಪದಿದ್ದರೆ ಜಲಸಂಪನ್ಮೂಲ ಖಾತೆ ಬಿಟ್ಟು ಬೇರೆ ಖಾತೆಯನ್ನು ಪಡೆದುಕೊಳ್ಳಿ. ಇಲ್ಲದಿದ್ದರೆ ಹೆಚ್ಚುವರಿಯಾಗಿ ಬೇರೆ ಖಾತೆಯನ್ನು ಕೊಡುವ ಸಂಬಂಧ ಹೈಕಮಾಂಡ್ ಜತೆ ಚರ್ಚಿಸುವುದಾಗಿಯೂ ಸುರ್ಜೇವಾಲ ಹೇಳಿದ್ದಾರೆ ಎನ್ನಲಾಗಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರ ರಾಮಲಿಂಗಾರೆಡ್ಡಿಯವರ ಜತೆ ನಿನ್ನೆ ರಾತ್ರಿ 2 ಗಂಟೆಯವರೆಗೂ ಸಭೆ ನಡೆಸಿ ಅವರ ಮನವೊಲಿಸುವ ಪ್ರಯತ್ನ ಮಾಡಿದರು. ರಾಮಲಿಂಗಾರೆಡ್ಡಿಯವರ ಜತೆಗಿನ ಮುಖ್ಯಮಂತ್ರಿ ಮಾತುಕತೆ ಯಶಸ್ವಿಯಾಗಿದೆ. ಅವರು ರಾಜೀನಾಮೆ ವಾಪಸ್ ಪಡೆಯುತ್ತಾರೆ ಎಂದು ಮುಖ್ಯಮಂತ್ರಿಗಳ ಆಪ್ತ ಮೂಲಗಳು ಹೇಳಿವೆಯಾದರೂ ರಾಮಲಿಂಗಾರೆಡ್ಡಿಯವರು ಸದ್ಯಕ್ಕಂತೂ ರಾಜೀನಾಮೆ ವಾಪಸ್ ಪಡೆದಿಲ್ಲ. ಹಾಗಾಗಿ ಖಾತೆ ಬಿಕ್ಕಟ್ಟು ಹಾಗೆಯೇ ಮುಂದುವರೆದಿದೆ.

## ರಾಮಲಿಂಗಾರೆಡ್ಡಿ ಅಸಮಾಧಾನ ದೊಡ್ಡ ವಿಚಾರವಲ್ಲ,ಶೀಘ್ರ ಇತ್ಯರ್ಥ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಸಚಿವ ರಾಮಲಿಂಗಾರೆಡ್ಡಿ ಅವರ ಅಸಮಾಧಾನದ ಜಟಾಪಟಿ ಕುರಿತು ಪ್ರತಿಕ್ರಿಯಿಸಿರುವ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್, "ಇದೇನು ಅಷ್ಟು ದೊಡ್ಡ ವಿಚಾರವಲ್ಲ, ಪಕ್ಷದ ಹಿರಿಯ ಮುಖಂಡರು ಶೀಘ್ರದಲ್ಲೇ ಈ ಸಮಸ್ಯೆಯನ್ನು ಬಗೆಹರಿಸಲಿದ್ದಾರೆ" ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.**

ನಗರದಲ್ಲಿಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಕ್ಷದ ಆಂತ-



ರಿಕ ಭಿನ್ನಾಭಿಪ್ರಾಯಗಳ ಕುರಿತು ಎದ್ದಿರುವ ವದಂತಿಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿದರು."ನಿನ್ನೆ ತಾನೇ ಮುಖ್ಯಮಂತ್ರಿಗಳು ರಾಮಲಿಂಗಾರೆಡ್ಡಿ ಅವರ ಜೊತೆಗೆ ಸುದೀರ್ಘವಾಗಿ ಮಾತನಾಡಿದ್ದಾರೆ. ಸದ್ಯದಲ್ಲೇ ಎಲ್ಲ ಸಮಸ್ಯೆಗಳು ಸುಖಾಂತ್ಯ ಕಾಣಲಿವೆ. ಪಕ್ಷದಲ್ಲಿ ಯಾವುದೇ ರೀತಿಯ ಭಿನ್ನಮತ ಉಳಿಯುವುದಿಲ್ಲ" ಎಂದು ಡಿಸಿಎಂ ಸ್ಪಷ್ಟಪಡಿಸಿದರು.

ಇದೇ ವೇಳೆ ಹಿರಿಯ ನಾಯಕ ಕೆ. ಎಚ್. ಮುನಿಯಪ್ಪ ಅವರ ಅಸಮಾಧಾನದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, "ಮುನಿಯಪ್ಪ ಅವರಿಗೆ ಯಾವುದೇ ರೀತಿಯ ಅಸಮಾಧಾನವಿಲ್ಲ. ನಿನ್ನೆ ಎಐಸಿಸಿ ನಾಯಕ ರಾಹುಲ್ ಗಾಂಧಿ ಅವರು ಬಂದಿದ್ದಾಗ, ಮುನಿಯಪ್ಪ ಅವರು ನಮ್ಮ ಜೊತೆಯಲ್ಲೇ ಕುಳಿತು ಸುದೀರ್ಘವಾಗಿ ಚರ್ಚಿಸಿದ್ದಾರೆ. ಹಾಗಾಗಿ ಅವರ ಮುನಿಸಿನ ಪ್ರಶ್ನೆಯೇ ಉದ್ಭವಿಸುವುದಿಲ್ಲ" ಎಂದರು.

ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ಮಾಡುತ್ತಿರುವ ನಿರಂತರ ಟೀಕೆಗಳ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ್, "ರಾಜಕಾರಣದಲ್ಲಿ ಇವೆಲ್ಲವೂ ಸರ್ವೇಸಾಮಾನ್ಯ. ವಿಪಕ್ಷಗಳ ಕೆಲಸವೇ ಟೀಕೆ ಮಾಡುವುದು. ಅದಕ್ಕೆಲ್ಲ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ನಮ್ಮ ಗಮನವೇನಿದ್ದರೂ ಅಭಿವೃದ್ಧಿಯ ಕಡೆಗೆ ಮಾತ್ರ" ಎಂದು ವಿರೋಧ ಪಕ್ಷಗಳಿಗೆ ತಿರುಗೇಟು ನೀಡಿದರು.

## ಸಹನಾ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

**ಮುದಗಲ್: ರಂದು ಸಹನಾ ಇಂಗ್ಲಿಷ್ ಮೀಡಿಯಂ ಶಾಲೆ, ಮುದಗಲ್ನಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.**

ಕಾರ್ಯಕ್ರಮವನ್ನು ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕ ವೃಂದದವರು ಉದ್ಘಾಟಿಸಿದರು. ನಂತರ ಶಾಲೆಯ ಮುಖ್ಯೋಪಾಧ್ಯಾಯ ಆದಿತ್ಯ ಅವರು ಮಾತನಾಡಿ, ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆ, ಮರಗಳ ಮಹತ್ವ, ನೀರಿನ ಸಂರಕ್ಷಣೆ ಹಾಗೂ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವ ಕುರಿತು ಮಾತನಾಡಿದರು. ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಭಾಷಣ, ಘೋಷಣೆಗಳು ಹಾಗೂ ಚಿತ್ರಕಲೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಶಾಲಾ ಆವರಣದಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸೇರಿ



ವಿವಿಧ ಸಸಿಗಳನ್ನು ನೆಟ್ಟು, ಅವುಗಳ ಸಂರಕ್ಷಣೆಯ ಪ್ರತಿಜ್ಞೆಯನ್ನು ಸ್ವೀಕರಿಸಿದರು.

ಪರಿಸರವನ್ನು ಸ್ವಚ್ಛವಾಗಿ ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದು ಶಿಕ್ಷಕರು ತಿಳಿಸಿದರು. ವಿದ್ಯಾರ್ಥಿಗಳು ಪರಿಸರ ಸ್ನೇಹಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು. ಈ ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕಿಯರಾದ , ಪ್ರಿಯಾಂಕ,ಕವಿತಾ, ರಾಧಾ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶಾಲೆಯ ಶಿಕ್ಷಕಿಯಾದ ಸುಮಯ್ಯ ನಿರೂಪಿಸಿದರು. ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

## ತುರ್ವಿಹಾಳದಲ್ಲಿ ಕುಡಿಯುವ ನೀರಿನ ಕೆರೆ ನಿರ್ಮಾಣ ಕಾಮಗಾರಿ ವೀಕ್ಷಿಸಿದ ಶಾಸಕ ಹಂಪನಗೌಡ ಬಾದರ್ಲಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: 2026 ನಗರಕ್ಕೆ ಶಾಶ್ವತ ಕುಡಿಯುವ ನೀರಿನ ಸೌಕರ್ಯ ಒದಗಿಸುವ ಹಿನ್ನೆಲೆಯಲ್ಲಿ ಎಸ್‌ಎಫ್‌ಸಿ ಹಾಗೂ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಅನುದಾನದ ಅಡಿಯಲ್ಲಿ 20 ಕೋಟಿ ವೆಚ್ಚದಲ್ಲಿ ತುರ್ವಿಹಾಳ ಹತ್ತಿರ ಹೊಸ ಕೆರೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಶಾಸಕ ಹಂಪನಗೌಡ ಬಾದರ್ಲಿ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.**

ತ್ವರಿತಗತಿಯಲ್ಲಿ ಗುಣಮಟ್ಟದೊಂದಿಗೆ ಕಾಮಗಾರಿ ಕೈಗೊಳ್ಳುವುದು, ನಿಗದಿಪಡಿಸಿದ ಅವಧಿಯಲ್ಲಿ ಪೂರ್ಣಗೊಳಿಸುವ ಕುರಿತಂತೆ ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿ, ಹೆಚ್ಚುತ್ತಿರುವ ನೀರಿನ ಬೇಡಿಕೆ ನಗರದಲ್ಲಿ ಜೂನ್ 2024ರಲ್ಲಿ ತೀವ್ರ ಕುಡಿಯುವ ನೀರಿನ ಸಮಸ್ಯೆ ಕಾಡಿತ್ತು. 15ಕ್ಕೂ ಹೆಚ್ಚು ದಿನಗಳಿಗೊಮ್ಮೆ



ನೀರು ಪೂರೈಕೆ ಮಾಡಿದ ಹಿನ್ನೆಲೆಯಲ್ಲಿ ಸಾರ್ವಜನಿಕರು, ನಗರಾಭಿವೃದ್ಧಿ ಹೋರಾಟ ಸಮಿತಿ ನೇತೃತ್ವದಲ್ಲಿ ನಗರಸಭೆಗೆ ಮುತ್ತಿಗೆ ಹೋರಾಟ ಹಮ್ಮಿಕೊಂಡಿತ್ತು.

ತದನಂತರ ಎಚ್ಚೆತ್ತ ನಗರಸಭೆ 2025 ರಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸಿತ್ತು. ಈ ಕುರಿತು ಶಾಸಕರನ್ನು ಹೋರಾಟ ಸಮಿತಿ ಗಮನ ಸೆಳೆದಾಗ ಕುಡಿಯುವ ನೀರಿನ ನಿರ್ಮಾಣಕ್ಕೆ ಸರ್ಕಾರದ ಗಮನ ಸೆಳೆದಿರುವುದಾಗಿ ತಿಳಿಸಿದ್ದನ್ನು ಸ್ಮರಿಸಬಹುದು. 2011 ಜನಗಣತಿ ಪ್ರಕಾರ ನಗರದಲ್ಲಿ 75 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇದೆ. ಪ್ರಸ್ತುತ 2026ರಲ್ಲಿ ಅದರ ಪ್ರಮಾಣ ಏರಿಕೆಯಾಗಿದೆ. ಜನವಸತಿ ಆಧರಿಸಿ ಕುಡಿಯುವ ನೀರಿನ ಸಮರ್ಪಕ ಪೂರೈಕೆಗೆ ನಗರಸಭೆ ಆದ್ಯತೆ ನೀಡಬೇಕಿದೆ.

## ಬೂತಲದಿನ್ನಿ ಗ್ರಾಮದ ನೆಲೆ ಇಲ್ಲದ ಸುಶೀಲಮ್ಮನಿಗೆ ಆಶ್ರಯ ನೀಡಿದ ಕಾರುಣ್ಯಾಶ್ರಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರ: ತಾಲೂಕಿನ ಬೂತಲದಿನ್ನಿ ಗ್ರಾಮದಲ್ಲಿ ಸುಮಾರು ವರ್ಷಗಳಿಂದ ವಾಸವಾಗಿದ್ದ 73 ವಯಸ್ಸಿನ ಸುಶೀಲಮ್ಮ ಇವರಿಗೆ ಯಾರು ಇಲ್ಲದ ವಿಷಯವನ್ನು ಗ್ರಾಮಸ್ಥರು ಸಿಂಧನೂರು ನಗರದ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸವ ಸ್ವಾಮಿ ಅವರಿಗೆ ಮಾಹಿತಿ ನೀಡಿದರು.**

ತಕ್ಷಣ ಆಶ್ರಮದ ಅನಾಥ ರಕ್ಷಕ ವಾಹನದೊಂದಿಗೆ ಬೂತಲದಿನ್ನಿ ಗ್ರಾಮಕ್ಕೆ ಆಶ್ರಮದ ಸಿಬ್ಬಂದಿಗಳು ತೆರಳಿ ಈ ತಾಯಿಯ ಬಗ್ಗೆ ಈಕೆಗೆ ಯಾರು ಇಲ್ಲ ಒಂದು ತಿಳಿಯಿತು. ಆ ಗ್ರಾಮದ ಅಪಾರ ಜನರ ಸಮ್ಮುಖದಲ್ಲಿ ಆಶ್ರಮಕ್ಕೆ ಕರೆತಂದು ಆಶ್ರಯ ಕಲ್ಪಿಸಿಕೊಡಲಾಯಿತು. ಈ ಸಂದರ್ಭದಲ್ಲಿ ಆಶ್ರಮದ ಕಾರ್ಯಾಧ್ಯಕ್ಷ ಡಾ. ಚನ್ನಬಸವ



ಸ್ವಾಮಿ ಹಿರೇಮಠ ಮಾತನಾಡಿ ಇಂತಹ ನೆಲೆ ಇಲ್ಲದವರ ಬದುಕಿನ ಬಂಧನದ ಕುಟುಂಬವಾಗಿದೆ ಕಾರುಣ್ಯ ಆಶ್ರಮ ದಿನೇ ದಿನೇ ಇಂತಹ ವೃದ್ಧರ ಹಾಗೂ ವಯಸ್ಕರ ಜಾಸ್ತಿಯಾಗುತ್ತಿದ್ದು ಬಹಳ ತುಂಬಾ ಬುದ್ಧಿಮಾಂದ್ಯರ ಸಂಖ್ಯೆ ಆಶ್ರಮದ ನಿರ್ವಹಣೆ ಕಷ್ಟದಲ್ಲಿ ನಡೆಯುತ್ತಿದೆ.

ಈ ನಮ್ಮ ಸೇವೆಯನ್ನು ತಾಲೂಕಾಡಳಿತ ಜಿಲ್ಲಾಡಳಿತ ಹಾಗೂ ನಮ್ಮ ಸಿಂಧನೂರಿನ ಇಬ್ಬರು ಶಾಸಕರುಗಳು ವಾಸ್ತವ ಸ್ಥಿತಿಯಲ್ಲಿ ಈ ಸಂಸ್ಥೆಯ ಕಾರ್ಯಗಳನ್ನು ನೋಡಿದರೂ ಸಹ ಸರ್ಕಾರದ ಯಾವುದೇ ಸೌಲಭ್ಯಗಳನ್ನು ನೀಡದೆ ಆಶ್ರಮಕ ಅವಶ್ಯಕತೆ ಇರುವ ಜಾಗವನ್ನು ಕೂಡ ನೀಡದಿರುವುದು ಬಹಳ ನೋವುಂಟು ಮಾಡಿದೆ. ಸುಮಾರು ವರ್ಷಗಳಿಂದ ಈ ತಾಯಿಯನ್ನು ಸ್ವಂತ ತಾಯಿ ಆಗಿ ನೋಡಿಕೊಂಡ ಬೂತಲದಿನ್ನಿಯ ಎಲ್ಲಾ ಗ್ರಾಮಸ್ಥರಿಗೆ ಸಿಂಧನೂರಿನ ಕರುಣೆಯ ಕಾರುಣ್ಯ ಕುಟುಂಬದ ವತಿಯಿಂದ ಧನ್ಯವಾದಗಳು. ನಾನು ಈ ಸಂದರ್ಭದಲ್ಲಿ ದಾನಿಗಳಲ್ಲಿ ಕೈಮುಗಿದು ಬೇಡಿಕೊಳ್ಳುವುದೇನೆಂದರೆ ಆಶ್ರಮದಲ್ಲಿ ಆಶ್ರಯದಾತುರುಗಳ ಸಂಖ್ಯೆ ಹೆಚ್ಚಾಗಿರುವುದರಿಂದ ತಾವುಗಳು ಆಹಾರ ರೂಪದಲ್ಲಾಗಲಿ ಅಥವಾ ಯಾವುದೇ ಸಹಾಯ ರೂಪದಲ್ಲಿ ಸಹಾಯ ಮಾಡಲು ವಿನಂತಿಸಿಕೊಳ್ಳುತ್ತಿದ್ದೇನೆ. ನೀವು ಮಾಡುವ ಸಹಾಯ ನಿಮ್ಮ ಹೆತ್ತವರಿಗೆ ನಮ್ಮ ಭಾರತೀಯ ಸಂಸ್ಕೃತಿಗೆ ವಿಶೇಷ ಅರ್ಥ ಕಲ್ಪಿಸಿಕೊಡುತ್ತವೆ.

ಇಂದಿನಿಂದ ಈ ತಾಯಿಯು ಕಾರುಣ್ಯ ಕುಟುಂಬದ ಕೂಸಾಗಿ ಕಾರುಣ್ಯ ಕುಟುಂಬದ ಮಡಿಲಲ್ಲಿ ಬದುಕು ಕಂಡುಕೊಳ್ಳುತ್ತಾಳೆ. ಕಾರುಣ್ಯ ಎನ್ನುವ ಮಡಿಲು ಪ್ರೀತಿ ಸ್ನೇಹ ಸಂಬಂಧ ಕರುಣೆ ಅನುಕಂಪದ ಅನುಬಂಧವಾಗಿದೆ ಎಂದು ಮಾತನಾಡಿ ಎಲ್ಲಾ ಗ್ರಾಮಸ್ಥರಲ್ಲಿ ಆಶ್ರಮಕ್ಕೆ ಖುದ್ದಾಗಿ ಭೇಟಿ ನೀಡುವುದಾಗಿ ಆಹ್ವಾನಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಜಗನ್ನಾಥ ರೆಡ್ಡಿ. ನಾಗರಾಜ. ಶೈಲಜಾ ಗಂ. ರವೀಂದ್ರ ಪಾಟೀಲ್. ಅಂಬಮ್ಮ ಗಂ. ಆಂಜನೇಯ. ರತ್ನಮ್ಮ ಗಂ. ಚಂದ್ರಪ್ಪ ಹಾಗೂ ಆಶ್ರಮದ ಸಿಬ್ಬಂದಿಗಳಾದ ಮರಿಯಪ್ಪ ಹರ್ಷವರ್ಧನ ಮತ್ತು ಬೂತಲದಿನ್ನಿಯ ನೂರಾರು ಗ್ರಾಮಸ್ಥರು ತಾಯಂದಿರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### ಪರಿಸರ ತುಂಬಿದ ನಮ್ಮೂರು

ಸುಂದರವಾಗಿದೆ ಪರಿಸರದ ನಮ್ಮೂರು.!
ಅಂದದ ಚಂದಾಗಿದೆ ನಮ್ಮ ಸಿಂಧನೂರು.!
ತುಂಬು ಸಂತೋಷದ ತವರು ನಮ್ಮೂರು.!
ಪರಿಸರಕೆ ಹಚ್ಚ ಹಸಿರಾಗಿಹುದು ನಮ್ಮೂರು.!!

ರಸ್ತೆ ಬದಿ ಮರಗಳ ಬೆಳಸಿದ ನಮ್ಮೂರು.!
ಹಸಿರು ತೋರಣ ಕಟ್ಟಿದಂತಿದೆ ನಮ್ಮೂರು.!
ಪರಿಸರ ಜಾಗೃತಿ ಮೂಡಿಸುವ ನಮ್ಮೂರು.!
ಸದಾ ಪರರನ್ನು ಪ್ರೀತಿಸುವವರು ನಮ್ಮೂರು.!!

ಸಸಿ ಉಡುಗೊರೆ ಕೊಡುವುದು ನಮ್ಮೂರು.!
ಪರಿಸರದ ಕಾಳಜಿ ವಹಿಸುವುದು ನಮ್ಮೂರು.!
ಜಾತಿಮತ ಮರೆತು ಪ್ರೀತಿ ತುಂಬಿದ ನಮ್ಮೂರು.!
ಭೂತಾಯಿ ನಂಬಿದ ರೈತರತವರು ನಮ್ಮೂರು.!!

ಹಲವು ಸಂಘಟನೆಯಗಳ ನಮ್ಮೂರು.!
ಪರಿಸರದುಳುವಿಗೆ ಸಹಕಾರಿಯಾಗಿದೆ ನಮ್ಮೂರು.!
ಪರಿಸರವಿದ್ದರೆ ಆರೋಗ್ಯವಿದ್ದಂತೆ ನಮ್ಮೂರು.!
ಪರಿಸರ ಬೆಳೆದಂತಹ ಭಾವೈಕ್ಯತೆಯ ನಮ್ಮೂರು.!!

ಪರಿಸರದ ಸೃಷ್ಟಿಯೇ ಮೆರೆದಂತ ನಮ್ಮೂರು.!
ವನಸಿರಿಯ ಸಕಲ ಸೌಭಾಗ್ಯದ ನಮ್ಮೂರು.!
ವೈದ್ಯ ವ್ಯಾಪಾರಿ ಕೃಷಿಕಾರ್ಮಿಕರಿರುವ ನಮ್ಮೂರು.!
ಸೊಬಗಿನ ಸೌಂದರ್ಯದ ಶಾಂತಿಯ ನಮ್ಮೂರು.!!

ತುಂಗಾಭದ್ರೆಯ ಕರುಣೆ ಕಟಾಕ್ಷ ನಮ್ಮೂರು.!
ಅಂಬಾದೇವಿ ನೆಲೆಸಿದ ತಾಯಿತನದ ನಮ್ಮೂರು.!
ಸಾಧು ಸೂಫಿಸಂತ ಗುರು ವಿರಕ್ತರ ನಮ್ಮೂರು.!
ಭಕ್ತದ ಖಣಜ ಭಕ್ತಿಗೆ ಹೆಸರು ನಮ್ಮೂರು.!!


ಹೆಸರಿಗಾಗಿ ಹಸಿರು ಬೆಳಸದ ನಮ್ಮೂರು.!
ಉಸಿರಿಗಾಗಿ ಹಸಿರು ಬೆಳೆಸುತ್ತಿದೆ ನಮ್ಮೂರು.!
ಭೇದ ಭಾವ ಮರೆತು ಪ್ರೀತಿಸುವ ಸಿಂಧನೂರು.!
ಕಂದಪಂಪಯ್ಯನ ಭಾವೈಕ್ಯತೆಯ ಸಿಂಧನೂರು .!!

–ಪಂಪಯ್ಯಸ್ವಾಮಿ ಸಾಲಿಮಠ ಸಿಂಧನೂರು

## ಮಲ್ಲಿಕಾರ್ಜುನ ಪಾಟೀಲ್ ಗೆ ನಿಗಮ ಮಂಡಳಿ ಸ್ಥಾನ ನೀಡಲು ಯಂಕನಗೌಡ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಮಸ್ಕಿ ವಿದಾನಸಭಾ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅದ್ಯಕ್ಷ ಮಲ್ಲಿಕಾರ್ಜುನಪಾಟೀಲ್ ಯದ್ದಲದಿನ್ನಿಅವರಿಗೆನೂತನವಾಗಿರಚನೆಯಾದ ಡಿಕೆ ಶಿವಕುಮಾರ ಸರಕಾರದಲ್ಲಿ ನಿಗಮ ಮಂಡಳಿ ನೀಡಬೇಕೆಂದು ಸ್ಥಳೀಯ ಕಾಂಗ್ರೆಸ್ ಯುವ ಮುಖಂಡ ಯಂಕನಗೌಡ ಎಸ್ ಒತ್ತಾಯ ಮಾಡಿದ್ದಾರೆ.**



ಮಲ್ಲಿಕಾರ್ಜುನ ಪಾಟೀಲ್ ಅವರು ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿ, ನಿರಂತರ ಸಂಘಟನೆ, ಕಾರ್ಯಕರ್ತರೊಂದಿಗೆ ಉತ್ತಮ ಬಾಂದವ್ಯ ಹಾಗೂ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸಂಕಷ್ಟದಲ್ಲಿದ್ದಾಗ,ಕಾರ್ಯಕರ್ತರಿಗೆ ಸ್ಪೂರ್ತಿ ತುಂಬಿ,ಹಳ್ಳಿ ಹಳ್ಳಿಗೆ ತಿರುಗಿ, ಕಾರ್ಯಕರ್ತರಿಗೆ ಹುಮ್ಮಸ್ಸು ಬಲಗೊಳಿಸಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿ,ಪ್ರತಾಪಗೌಡ ಪಾಟೀಲ್ ಸೋಲಿಗೆ ಇವರ ಪಾತ್ರ ಪ್ರಮುಖವಾಗಿದೆ,ಹೀಗಾಗಿ ಅವರ ಸೇವೆ ಪರಿಗಣಿಸಿ ಕಾಂಗ್ರೆಸ್ ವರಿಷ್ಠರು ನಿಗಮ ಮಂಡಳಿಗಳಲ್ಲಿ ಸೂಕ್ತ ಸ್ಥಾನ ನೀಡಬೇಕು ಮತ್ತಷ್ಟು ಕ್ಷೇತ್ರದಲ್ಲಿ ಪಕ್ಷ ಬಲವರ್ಧನೆ ಚೈತನ್ಯ ಬರುತ್ತದೆ ಎಂದು ಕಾಂಗ್ರೆಸ್ ಯುವ ಮುಖಂಡ ಯಂಕನಗೌಡ ಎಸ್ ಪತ್ರಿಕೆಗೆಯೊಂದಿಗೆ ಮಾತನಾಡಿದರು.

## ವಾಹನ ಒದಗಿಸಲು ಆಸಕ್ತರಿಂದ ಅರ್ಜಿ ಆಹ್ವಾನ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜೂನ್ 06 (ಕರ್ನಾಟಕ ವಾರ್ತೆ): ರಾಯಚೂರಿನ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾರ್ಯಾಲಯದ ಅಧಿಕಾರಿಗಳ ಉಪಯೋಗಕ್ಕಾಗಿ 2026–27ನೇ ಸಾಲಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ 4 ಚಕ್ರದ ವಾಹನ ಒದಗಿಸಲು ಆಸಕ್ತ ಮಾಲೀಕರಿಂದ ಅರ್ಜಿ ಆಹ್ವಾನಿಸಲಾಗಿದೆ.**

ಟಾಟಾ ಸುಮೋ/ಬೊಲೆರೋ, ಹುಂಡೈ, ಎಕ್ಸೆಂಟಾ, ಟೋಯೋಟಾ, ಎರ್ಟಿಗಾ ಹಾಗೂ ಸ್ವಿಪ್ಟ (ಜೀಪ/ ಕಾರು) ಪ್ಯಾಸೆಂಜರ ಹವಾನಿಯಂತ್ರಿತ (ಎಸಿ) ಮಾಡೆಲ್ 2024ರ ನಂತರದ ವಾಹನವನ್ನು ತಿಂಗಳ ಬಾಡಿಗೆ ಆಧಾರದ ಮೇಲೆ ಒದಗಿಸಬೇಕಾಗಿದೆ. ಆಸಕ್ತಿಯುಳ್ಳವರು ದಿನಾಂಕ: 25–06–2026ರೊಳಗೆ ಕಚೇರಿ ಅವಧಿಯಲ್ಲಿ ಟೆಂಡರ್ ಅರ್ಜಿಗಳನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಬಹುದಾಗಿದೆ. ತದನಂತರ ಬಂದ ಲಕೋಟೆಗಳನ್ನು ಸ್ವೀಕರಿಸುವುದಿಲ್ಲ, ಹಾಗೂ ಸ್ವೀಕರಿಸಲಾದ ಅರ್ಜಿಗಳನ್ನು ದಿನಾಂಕ: 29–06–2026ರಂದು ಮಧ್ಯಾಹ್ನ 12ಗಂಟೆಗೆ ತೆರೆಯಲಾಗುವುದು. ಅರ್ಜಿ ನಮೂನೆಗಳನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ರಾಯಚೂರು ರವರ ಕಚೇರಿಯಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532–226226ಗೆ ಅಥವಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, #1–9–138, ಗೋಲ್ ಮಾರ್ಕೆಟ್, ಆಜಾದನಗರ, ರಾಯಚೂರು ಅವರ ಅಧಿಕೃತ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಿಂಧನೂರು ನಗರಸಭೆಯ RRR ಕೇಂದ್ರಕ್ಕೆ ಪಾಟೀಲ ಶಾಲೆಯ ವಿದ್ಯಾರ್ಥಿಗಳ ಭೇಟಿ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಪರಿಸರ ಸಂರಕ್ಷಣೆ, ತ್ಯಾಜ್ಯ ನಿರ್ವಹಣೆ ಹಾಗೂ ಮರುಬಳಕೆಯ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಸಿಂಧನೂರು ನಗರಸಭೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ RRR (Reduce, Reuse, Recycle) ಕೇಂದ್ರಕ್ಕೆ ನಗರದ ಪಾಟೀಲ ಶಾಲೆಯ ವಿದ್ಯಾರ್ಥಿಗಳು ಭೇಟಿ ನೀಡಿ ಕೇಂದ್ರದ ಕಾರ್ಯವೈಖರಿಯನ್ನು ವೀಕ್ಷಿಸಿದರು.**



ವಿದ್ಯಾರ್ಥಿಗಳಿಗೆ ತ್ಯಾಜ್ಯ ವಿಂಗಡಣೆ, ಮರುಬಳಕೆ ಹಾಗೂ ಪರಿಸರ ಸಂರಕ್ಷಣೆಯ ಮಹತ್ವದ ಬಗ್ಗೆ ಸಮಗ್ರ ಮಾಹಿತಿ ನೀಡಲಾಯಿತು. ನಗರಸಭೆಯ ಪರಿಸರ ಅಭಿಯಂತರ ಚೇತನಕುಮಾರ ಅವರು ವಿದ್ಯಾರ್ಥಿಗಳಿಗೆ ಕೇಂದ್ರದ ಉದ್ದೇಶ, ಕಾರ್ಯಚಟುವಟಿಕೆಗಳು ಹಾಗೂ ಮರುಬಳಕೆಯ ಪ್ರಕ್ರಿಯೆಗಳ ಬಗ್ಗೆ ವಿವರಿಸಿದರು. ಮನೆಗಳಲ್ಲಿ ಬಳಕೆಯಾಗದೆ ಉಳಿದಿರುವ ವಸ್ತುಗಳನ್ನು ಕಸದೊಂದಿಗೆ ಬೆರೆಸಿ ತ್ಯಜಿಸುವ ಬದಲು ಖಖಖ ಕೇಂದ್ರಕ್ಕೆ ನೀಡಿದರೆ ಅವುಗಳನ್ನು ಮರುಬಳಕೆ ಅಥವಾ ಮರುಸಂಸ್ಕರಣೆ ಮಾಡಬಹುದಾಗಿದೆ. ಇದರಿಂದ ಪರಿಸರ ಮಾಲಿನ್ಯ ತಗ್ಗುವುದರ ಜೊತೆಗೆ ತ್ಯಾಜ್ಯದ ಪ್ರಮಾಣವೂ ಕಡಿಮೆಯಾಗುತ್ತದೆ ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯ, ಇ–ತ್ಯಾಜ್ಯ ಹಾಗೂ ಇತರೆ ಬಳಕೆ ಮುಗಿದ ವಸ್ತುಗಳು ಪರಿಸರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿವೆ. ಇವುಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸದಿದ್ದರೆ ಮಣ್ಣು, ನೀರು ಹಾಗೂ ಗಾಳಿಯ ಮಾಲಿನ್ಯ ಹೆಚ್ಚಾಗುತ್ತದೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಖಖಖ ಕೇಂದ್ರಗಳ ಸ್ಥಾಪನೆಗೆ ಒತ್ತು ನೀಡುತ್ತಿವೆ ಎಂದು ಹೇಳಿದರು. ಖಖಖ ಕೇಂದ್ರಗಳಲ್ಲಿ ಹಳೆಯ ಬಟ್ಟೆಗಳು, ಪುಸ್ತಕಗಳು, ಶಾಲಾ ಸಾಮಗ್ರಿಗಳು, ಆಟಿಕೆಗಳು, ಪ್ಲಾಸ್ಟಿಕ್ ವಸ್ತುಗಳು, ಎಲೆಕ್ಟ್ರಾನಿಕ್ ಉಪಕರಣಗಳು, ಗೃಹೋಪಯೋಗಿ ವಸ್ತುಗಳು ಸೇರಿದಂತೆ ಮರುಬಳಕೆ ಯೋಗ್ಯ ವಸ್ತುಗಳನ್ನು ಸಂಗ್ರಹಿಸಲಾಗುತ್ತದೆ.

ಇವುಗಳಲ್ಲಿ ಉಪಯೋಗಿಸಬಹುದಾದ ವಸ್ತುಗಳನ್ನು ಅಗತ್ಯವಿರುವವರಿಗೆ ಒದಗಿಸಲಾಗುತ್ತದೆ ಹಾಗೂ ಉಳಿದ ವಸ್ತುಗಳನ್ನು ಮರುಸಂಸ್ಕರಣೆಗೆ ಕಳುಹಿಸಲಾಗುತ್ತದೆ. ಇದರಿಂದ ಸಂಪನ್ಮೂಲಗಳ ಸಮರ್ಪಕ ಬಳಕೆ ಸಾಧ್ಯವಾಗುತ್ತದೆ ಎಂದು ವಿವರಿಸಿದರು. ವಿದ್ಯಾರ್ಥಿಗಳು ಕೇಂದ್ರದ ವಿವಿಧ ವಿಭಾಗಗಳನ್ನು ವೀಕ್ಷಿಸಿ, ತ್ಯಾಜ್ಯ ವಿಂಗಡಣೆ ಹೇಗೆ ನಡೆಯುತ್ತದೆ, ಮರುಬಳಕೆ ಯೋಗ್ಯ ವಸ್ತುಗಳನ್ನು ಹೇಗೆ ಸಂಗ್ರಹಿಸಲಾಗುತ್ತದೆ ಹಾಗೂ ಅವುಗಳನ್ನು ಯಾವ ರೀತಿಯಲ್ಲಿ ಮರುಸಂಸ್ಕರಣೆ ಮಾಡಲಾಗುತ್ತದೆ ಎಂಬುದರ ಬಗ್ಗೆ ಮಾಹಿತಿ ಪಡೆದರು.

ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಹಲವಾರು ಪ್ರಶ್ನೆಗಳನ್ನು ಕೇಳಿ ಅಧಿಕಾರಿಗಳಿಂದ ಉತ್ತರಗಳನ್ನು ಪಡೆದುಕೊಂಡರು. ಪರಿಸರ ಅಭಿಯಂತರ ಚೇತನಕುಮಾರ ಅವರು, ಪ್ರತಿಯೊಂದು ಮನೆಯಲ್ಲಿ ತ್ಯಾಜ್ಯವನ್ನು ಒಣ ಮತ್ತು ತೇವ ತ್ಯಾಜ್ಯವೆಂದು ಪ್ರತ್ಯೇಕವಾಗಿ ವಿಂಗಡಿಸಬೇಕು. ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಕಸದೊಂದಿಗೆ ಬೆರೆಸಿ ತ್ಯಜಿಸದೆ ಖಖಖ ಕೇಂದ್ರಕ್ಕೆ ನೀಡಬೇಕು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಕೇಂದ್ರದ ಸದುಪಯೋಗ ಪಡೆದುಕೊಂಡರೆ ನಗರವನ್ನು ಸ್ವಚ್ಛ, ಸುಂದರ ಹಾಗೂ ಪರಿಸರ ಸ್ನೇಹಿ ನಗರವನ್ನಾಗಿ ರೂಪಿಸಬಹುದು ಎಂದು ತಿಳಿಸಿದರು.

ಭೇಟಿಯ ಅಂತ್ಯದಲ್ಲಿ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆ, ತ್ಯಾಜ್ಯ ವಿಂಗಡಣೆ ಹಾಗೂ ಮರುಬಳಕೆಯ ಬಗ್ಗೆ ಅರಿವು ಮೂಡಿಸಿಕೊಂಡು, ತಮ್ಮ ಮನೆಗಳಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತೆ ಕಾಪಾಡುವ ಸಂಕಲ್ಪ ಮಾಡಿದರು. ಸಾರ್ವಜನಿಕರೂ ಸಹ ಮನೆಗಳಲ್ಲಿ ಬಳಕೆಯಾಗದೆ ಉಳಿದಿರುವ ಮರುಬಳಕೆ ಯೋಗ್ಯ ವಸ್ತುಗಳನ್ನು ನಗರದ ಖಖಖ ಕೇಂದ್ರಕ್ಕೆ ನೀಡಿ ಪರಿಸರ ಸಂರಕ್ಷಣೆಯ ಮಹತ್ವದ ಕಾರ್ಯದಲ್ಲಿ ಕೈಜೋಡಿಸಬೇಕು ಎಂದು ನಗರಸಭೆ ಮನವಿ ಮಾಡಿದೆ. ಪಾಟೀಲ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಆರ್.ಸಿ ಪಾಟೀಲ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಸಿಬ್ಬಂದಿಗಳು, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ

❏ ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಹಸಿರು ಪರಿಸರ ನಿರ್ಮಾಣಕ್ಕಾಗಿ ಪ್ರತಿಯೊಬ್ಬರೂ ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸಬೇಕು ಎಂದು ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯ ಮುಖ್ಯಗುರುಗಳಾದ ಅಮರನಾಥ ಹಳ್ಳೂರ್ ಅವರು ಹೇಳಿದರು.**



ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆ, ಬಳಗಾನೂರು ವತಿಯಿಂದ ಶಾಲಾ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮುಖ್ಯಗುರುಗಳು, ಪರಿಸರ ದಿನದ ಮಹತ್ವವನ್ನು ವಿವರಿಸಿ ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ಕಾಳಜಿ ವಹಿಸುವಂತೆ ಕರೆ ನೀಡಿದರು. ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಅರಣ್ಯ ನಾಶ, ಮಾಲಿನ್ಯ, ಜಾಗತಿಕ ತಾಪಮಾನ ಏರಿಕೆ ಹಾಗೂ ನೀರಿನ ಕೊರತೆ ಮುಂತಾದ ಸಮಸ್ಯೆಗಳು ಮಾನವ ಜೀವನಕ್ಕೆ ಗಂಭೀರ ಸವಾಲುಗಳನ್ನು ತಂದೊಡ್ಡಿವೆ. ಇಂತಹ ಸಂದರ್ಭಗಳಲ್ಲಿ ಗಿಡ–ಮರಗಳ ಸಂರಕ್ಷಣೆ ಅತ್ಯಂತ ಅಗತ್ಯವಾಗಿದೆ. ಒಂದು ಮರ ಸಾವಿರ ಜೀವಗಳಿಗೆ ಆಸರೆಯಾಗಿದ್ದು, ಮಾನವನಿಗೆ ಅಗತ್ಯವಾದ ಆಮ್ಲಜನಕವನ್ನು ಒದಗಿಸುವ ಮೂಲಕ ಜೀವ ಸಂಕುಲದ ಉಳಿವಿಗೆ ನೆರವಾಗುತ್ತದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಸೋಮಶೇಖರ್ ಹಾಗೂ ಬಸವರಾಜ್ ಯಾದಗಿರಿ ಅವರು ಮಾತನಾಡಿ, ವಿದ್ಯಾರ್ಥಿಗಳು ಬಾಲ್ಯದಿಂದಲೇ ಪರಿಸರ ಪ್ರೇಮವನ್ನು ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ವರ್ಷಕ್ಕೆ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದರ ಆರೈಕೆ ಮಾಡುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡಬೇಕು ಎಂದು ತಿಳಿಸಿದರು.

ನಂತರ ಶಾಲಾ ಆವರಣದಲ್ಲಿ ವಿವಿಧ ಜಾತಿಯ ನೆರಳು, ಹಣ್ಣು ಮತ್ತು ಔಷಧೀಯ ಸಸಿಗಳನ್ನು ನೆಡಲಾಯಿತು. ವಿದ್ಯಾರ್ಥಿಗಳು ಉತ್ಸಾಹದಿಂದ ಗಿಡ ನೆಡುವ ಕಾರ್ಯದಲ್ಲಿ ಭಾಗವಹಿಸಿ, ಗಿಡಗಳ ಸಂರಕ್ಷಣೆ ಮತ್ತು ಪರಿಸರ ರಕ್ಷಣೆಯ ಸಂಕಲ್ಪ ಮಾಡಿದರು. ಶಾಲಾ ಆವರಣವನ್ನು ಹಸಿರೀಕರಣಗೊಳಿಸುವ ಉದ್ದೇಶದಿಂದ ಮುಂದಿನ ದಿನಗಳಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಸಸಿಗಳನ್ನು ನೆಡುವ ಯೋಜನೆ ರೂಪಿಸಲಾಗಿದೆ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿತು.

ಕಾರ್ಯಕ್ರಮದಲ್ಲಿ ಶಿಕ್ಷಕರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಉಪಸ್ಥಿತರಿದ್ದು, ಪರಿಸರ ಸಂರಕ್ಷಣೆಯ ಪ್ರತಿಜ್ಞೆಯನ್ನು ಸ್ವೀಕರಿಸಿದರು. "ಹಸಿರು ಉಳಿದರೆ ಭವಿಷ್ಯ ಉಳಿಯುತ್ತದೆ, ಮರ ಉಳಿದರೆ ಜೀವ ಉಳಿಯುತ್ತದೆ" ಎಂಬ ಸಂದೇಶದೊಂದಿಗೆ ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

## ಹಿಮಾಚಲ ಪ್ರದೇಶದಲ್ಲಿ ಮಧ್ಯರಾತ್ರಿ 5.0 ತೀವ್ರತೆಯ ಭೂಕಂಪ

❏ ನೈಜ್ಯ ದೆಸೆ ನ್ಯೂಸ್

**ಶಿಮ್ಲಾ ಹಿಮಾಚಲ ಪ್ರದೇಶದಲ್ಲಿ ಮಧ್ಯರಾತ್ರಿ ಮಧ್ಯಮ ತೀವ್ರತೆಯ 5.0 ತೀವ್ರತೆಯ ಭೂಕಂಪ ಸಂಭವಿಸಿದೆ.ಕಂಪನದ ನಂತರ ಕಾಂಗ್ರಾ, ಚಂಬಾ ಮತ್ತು ಹಿಮಾಚಲ ಪ್ರದೇಶದ ಪಕ್ಕದ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಕಂಪನದ ಅನುಭವವಾಗಿದೆ.**



ರಾತ್ರಿ 10:04 ಕ್ಕೆ ಕಾಂಗ್ರಾ–ಚಂಬಾ ಗಡಿಯ ಬಳಿ ಧರ್ಮಶಾಲಾದಿಂದ ಸುಮಾರು 40 ಕಿ.ಮೀ ದೂರದಲ್ಲಿ ಸಂಭವಿಸಿದ ಭೂಕಂಪದ ಆಳ 5 ಕಿ.ಮೀ ಎಂದು ಹವಾಮಾನ ಕಚೇರಿ ತಿಳಿಸಿದೆ, ಕೇಂದ್ರಬಿಂದು ಕಾಂಗ್ರಾದ ಧಾರ್ ಗೋಡೋಯ್ ಬಳಿ ಇದೆ ಎಂದು ಹೇಳಿದೆ. ಧರ್ಮಶಾಲಾ ಮತ್ತು ಹತ್ತಿರದ ಪ್ರದೇಶಗಳಲ್ಲಿ ಕಂಪನದ ಅನುಭವವಾದ ನಂತರ ಜನರು ಭಯಭೀತರಾಗಿ ತಮ್ಮ ಮನೆಗಳಿಂದ ಹೊರಗೆ ಓಡಿಹೋದರು, ಆದರೆ ರಾಜ್ಯದ ಯಾವುದೇ ಭಾಗದಿಂದ ಇದುವರೆಗೆ ಯಾವುದೇ ಜೀವ ಅಥವಾ ಆಸ್ತಿ ನಷ್ಟ ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾಂಗ್ರಾ ಮತ್ತು ಚಂಬಾ ಜಿಲ್ಲೆಗಳು ಭೂಕಂಪನ ವಲಯ 5 ರ ಅಡಿಯಲ್ಲಿ ಬರುತ್ತವೆ, ಇದು ಹೆಚ್ಚಿನ ಹಾನಿಯ ಅಪಾಯದ ವಲಯವಾಗಿದೆ. ಚಂಡೀಗಢ ಮತ್ತು ಪಂಜಾಬ್ ಮತ್ತು ಹರಿಯಾಣದ ಕೆಲವು ಭಾಗಗಳಲ್ಲಿಯೂ ಕಂಪನದ ಅನುಭವವಾಗಿದೆ ಎಂದು ವರದಿಗಳು ತಿಳಿಸಿವೆ.

ಮೂರು ಅಂತಸ್ತಿನ ಕಟ್ಟಡದ ಎರಡನೇ ಮಹಡಿಯಲ್ಲಿ ವಾಸಿಸುವ ಚಂಡೀಗಢ ನಿವಾಸಿ ಬಲದೇವ್ ಚಂದ್, ಬೆಳಿಗ್ಗೆ 10 ಗಂಟೆ ಸುಮಾರಿಗೆ ಮಲಗಲು ಸಿದ್ಧರಾಗುತ್ತಿದ್ದಾಗ ಸ್ವಲ್ಪ ಕಂಪನದ ಅನುಭವವಾಯಿತು ಎಂದು ಹೇಳಿದರು.ಕಂಪನವು ಕೆಲವು ಸೆಕೆಂಡುಗಳ ಕಾಲ ಮಾತ್ರ ಇತ್ತು ಎಂದು ಅವರು ಹೇಳಿದರು.

## ಮಾಜಿ ಸಚಿವ ಎನ್.ಎಸ್. ಬೋಸರಾಜು ಜನ್ಮದಿನ ಅನಾಥಾಶ್ರಮದಲ್ಲಿ ಆಚರಣೆ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಿರವಾರ ತಾಲೂಕಿನ ಮಾಡಗಿರಿ ಗ್ರಾಮದ ವಾತ್ಸಲ್ಯ ಅನಾಥಾಶ್ರಮದಲ್ಲಿ ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಓ. ಖ. ಃಠಜಡಿಚಿರಿಡಿ ಅವರ ಜನ್ಮದಿನವನ್ನು ಮಾನ್ವಿ ಕ್ಷೇತ್ರದ ಶಾಸಕರಾದ G. Hampayya Nayak ಅವರ ನೇತೃತ್ವದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.**



ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಹಂಪಯ್ಯ ನಾಯಕ ಅವರು, “ನಮ್ಮ ರಾಜಕೀಯ ಮಾರ್ಗದರ್ಶಕರು ಹಾಗೂ ಗುರುಗಳಾದ ಎನ್.ಎಸ್. ಬೋಸರಾಜು ಅವರ ಜನ್ಮದಿನವನ್ನು ಆಶ್ರಮದ ಮಕ್ಕಳ ಹಾಗೂ ವೃದ್ಧರೊಂದಿಗೆ ಆಚರಿಸುತ್ತಿರುವುದು ಸಂತಸದ ವಿಷಯವಾಗಿದೆ. ವಾತ್ಸಲ್ಯ ಅನಾಥಾಶ್ರಮಕ್ಕೆ ಶಾಶ್ವತ ಸೂರು (ಕಟ್ಟಡ) ಒದಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು” ಎಂದು ಭರವಸೆ ನೀಡಿದರು.

ಬಳಿಕ ಮಾಜಿ ಸಚಿವ ಎನ್. ಎಸ್. ಬೋಸರಾಜು ಅವರ ಜನ್ಮದಿನದ ಅಂಗವಾಗಿ ಆಶ್ರಮದಲ್ಲಿರುವ ಅನಾಥ ಮಕ್ಕಳು ಹಾಗೂ ವೃದ್ಧರೊಂದಿಗೆ ಕೇಕ್ ಕತ್ತರಿಸಿ ಸಂಭ್ರಮಿಸಲಾಯಿತು. ಅಲ್ಲದೆ, ಆಶ್ರಮದ ನಿವಾಸಿಗಳಿಗೆ ಅಗತ್ಯವಿರುವ ದವಸ–ಧಾನ್ಯಗಳನ್ನು ವಿತರಿಸುವ ಮೂಲಕ ಮಾನವೀಯ ಸೇವೆ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಪಂಚಗ್ಯಾರಂಟಿ ಸಮಿತಿ ತಾಲೂಕು ಅಧ್ಯಕ್ಷ ಬ್ರಿಜೇಶ್ ಪಾಟೀಲ್, ಯುವ ಮುಖಂಡರಾದ ವೈ. ಶರಣಯ್ಯ ನಾಯಕ, ಎಂ. ಶ್ರೀನಿವಾಸ್, ವಾತ್ಸಲ್ಯ ಸೇವಾಶ್ರಮದ ಅಧ್ಯಕ್ಷ ವೀರಭದ್ರಪ್ಪ ಮಾಡಗಿರಿ, ಪಂಚಾಯಿತಿ ಅಧ್ಯಕ್ಷ ಹಾಜಿ ಚೌದ್ರಿ, ಸದಸ್ಯರಾದ ಮಾರ್ಕಪ್ಪ, ಸೂರಿ ದುರುಗಣ್ಣ ನಾಯಕ, ಮಾಜಿ ಸದಸ್ಯ ಗಡ್ಲ ಬಸವರಾಜ, ಚನ್ನಪ್ಪ ಗಡ್ಲ, ದೇವೇಂದ್ರಪ್ಪ ಬೊಮ್ಮನಾಳ, ರಂಗನಾಥ ನಾಯಕ, ಶಿವಪ್ಪಗೌಡ ಹಳ್ಳಿಹೊಸೂರು, ಬಸವರಾಜ ಗುಡದಿನ್ನಿ, ಲಕ್ಷ್ಮೀಕಾಂತ, ಶ್ರೀಧರಸ್ವಾಮಿ, ಡಿ. ಯಮನೂರು, ಅಕ್ಬರ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಜಯವಂತ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಅರ್ಥಪೂರ್ಣವಾಗಿ ಆಚರಿಸಲಾಯಿತು.

## ವಿಶ್ವ ಪರಿಸರ ಹಾಗೂ ವೀರೇಶ ದೇವರಮನಿ ವಿವಾಹ ವಾರ್ಷಿಕೋತ್ಸವ ಪ್ರಯುಕ್ತ ವೃದ್ಧಾಶ್ರಮದಲ್ಲಿ ಸಂಗೀತ ಸಂಜೆ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು:ಸರ್ವರೊಂದಿಗೆಸರಳಸಜ್ಜನಿಕೆವ್ಯಕ್ತಿಯಾಗಿ ದಿನನಿತ್ಯ ಸಂಗೀತ ಆರಾಧಕ ಮತ್ತು ಬರಹಗಾರರಾಗಿ, ವಿಡಿಯೋ ಎಡಿಟರ್, ಕರೋಕೆ ಮೇಕರ್, ಹತ್ತಾರು ಕೆಲಸಗಳಲ್ಲಿ ತೊಡಗಿಕೊಂಡು ಯಾವುದೇ ಫಲಾಪೇಕ್ಷೆ ಬಯಸದೆ ಸಂಗೀತ ಸೇವೆ ಮಾಡಿದ ಇಂಥಹ ಕಲಾಸೇವಕರಾದ ಉಮಾದೇವಿ ವೀರೇಶ ದೇವರಮನಿ ದಂಪತಿಗಳ ವಿವಾಹ ವಾರ್ಷಿಕೋತ್ಸವ ಎಲ್ಲಾ ಸಂಗೀತ ಪ್ರಿಯರು ಸಂಭ್ರಮಾಚರಿಸಿ, ಪುನೀತ್ ಪುಣ್ಯಾಶ್ರಮದ ದೇವರ ಮಕ್ಕಳಾದ ವೃದ್ಧರಿಗೆ ಪ್ರಸಾದ ವ್ಯವಸ್ಥೆಯನ್ನು ಮದುವೆ ವಾರ್ಷಿಕೋತ್ಸವದ ಪ್ರಯುಕ್ತ ಮಾಡಿದ್ದು, ವಿಶೇಷ ಮತ್ತು ಶ್ಲಾಘನೀಯ ಕಾರ್ಯ ಎಂದು ವಕೀಲರಾದ ಜಡಿಯಪ್ಪ ಹೇಳಿದರು.**




ನಗರದ ಪುನೀತ್ ಪುಣ್ಯಾಶ್ರಮದಲ್ಲಿ ವಿಶ್ವ ಪರಿಸರ ಮತ್ತು ವೀರೇಶ ದೇವರಮನಿ ದಂಪತಿಗಳ ಮದುವೆ ವಾರ್ಷಿಕೋತ್ಸವ ಪ್ರಯುಕ್ತ ಆರ್.ಜಿ.ಕಲಾ ತಂಡದಿಂದ ಅದ್ದೂರಿ ರಸಮಂಜರಿ ಕಾರ್ಯಕ್ರಮವನ್ನು ಮಾನ್ವಿ ಸಿಂಧನೂರು ನಗರ ಮತ್ತು ಹಳ್ಳಿಯ ಕಲಾವಿದರೆಲ್ಲರೂ ಸೇರಿ, ಎಲ್ಲಾ ಗಾಯಕರ ಕಂಠಸಿರಿಯಲ್ಲಿ ಗಾಯನವನ್ನು ಪ್ರಸ್ತುತ ಪಡಿಸಿ, ಉಮಾದೇವಿ ವೀರೇಶ ದೇವರಮನಿ ದಂಪತಿಗಳಿಗೆ ಮೊದಲನೇ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳನ್ನು ಕೋರಿ ಉಡುಗೊರೆ ನೀಡಿ ಹರಸಿ ಹಾರೈಸಿ ಮಾತನಾಡಿದರು.

ಪುನೀತ್ ಪುಣ್ಯಾಶ್ರಮದ ಸಂಸ್ಥಾಪಕ ಪಂಪಯ್ಯಸ್ವಾಮಿ ಮಾತಾನಾಡಿ, ವೀರೇಶ ದೇವರಮನಿ ಮತ್ತು ನಮಗೂ ತುಂಬಾ ವರ್ಷಗಳ ಸ್ನೇಹ ಸಾಕಷ್ಟು ಕಷ್ಟನಷ್ಟಗಳನ್ನು ಎದುರಿಸಿ, ವೀರೇಶ ದೇವರಮನಿ ಆರ್.ಜಿ.ಕರೋಕೆ ಸ್ಟುಡಿಯೋ ಸ್ಥಾಪಿಸಿ ಹಲವಾರು ಹವ್ಯಾಸಿ ಗಾಯಕರಿಗೆ ನೆರಳಾಗಿದ್ದಾರೆ. ಅದೇ ರೀತಿ ಪುನೀತ್ ಪುಣ್ಯಾಶ್ರಮದ ಶ್ರಮ ಬಹಳಷ್ಟಿದೆ. ನಮಗೆ ಸಮಾಜಮುಖಿ ಕಾರ್ಯ ಮಾಡಲು ಸರ್ವರ ಪ್ರೇರಣೆ ಸಲಹೆ ಸಹಕಾರ ಮುಖ್ಯ ಹಿರಿಯರ ಮಾರ್ಗದರ್ಶನದಂತೆ ಬದುಕು ಕಟ್ಟಿಕೊಂಡು ಮತ್ತೊರ್ವರ ಹಿತವನ್ನು ಬಯಸುತ್ತಾ ಸಾಗುತ್ತಿದ್ದೇವೆ ಎಂದರು.

ನಂತರ ವೀರೇಶ ದೇವರಮನಿ ಮಾತನಾಡಿ, ನಾವು ಕಲಿಯುವುದರ ಜೊತೆಗೆ ನಾಲ್ಕಾರು ಜನ ಸಂಗೀತ ಆಸಕ್ತರು ಕಲಿಯಲಿ ಎನ್ನುವ ನಿಟ್ಟಿನಲ್ಲಿ ಸಹೋದರಿ ಬೆಳಕಿನ ಗಾನಕೋಗಿಲೆ ರಂಗಮ್ಮಗಲಗ್ ಅವರನ್ನು ತಂಡದ ನಾಯಕಿ ಗಾಯಕಿಂಯನ್ನಾಗಿಸಿ ಸ್ಟುಡಿಯೋದಲ್ಲಿ ಮಾರ್ಗದರ್ಶನರನ್ನಾಗಿ ಆರ್ಕೆಸ್ಟ್ರಾದಲಿ ಗಾಯಕರನ್ನಾಗಿ ಕರೋಕೆ ವಿಡಿಯೋ ಎಡಿಟರ್ ಆಗಿ ಸೇವೆ ಸಲ್ಲಿಸಲು ಸಹಕರಿಸಿ ಎಷ್ಟೋ ಗಾಯಕರು ಆರ್ಕೆಸ್ಟ್ರಾ ಟೀಮ್ ಕಟ್ಟಿಕೊಳ್ಳಲು ನಮ್ಮಂತೆ ಕರೋಕೆ ಸ್ಟುಡಿಯೋ ಮಾಡಲು ಸಹಕಾರ ನೀಡಿದ್ದೇವೆ. ಸಂಗೀತ ಎಂಬುದು ಮನಸ್ಸಿನ ಆನಂದದ ದಿವ್ಯ ಔಷಧಿಯಾಗಿದೆ ಎಂದರು.

ಈ ವೇಳೆ: ಪಲ್ಲವಿ ವೀರೇಶ ದೇವರಮನಿ, ಲಕ್ಷ್ಮೀದೇವಿ ಮೆದಕಿನಾಳ, ಪವನಕುಮಾರ, ಹುಸೇನಪ್ಪ ಪೂಜಾರ್, ಗುರುರಾಜ ಕುಲಕರ್ಣಿ, ಬೀಮಮ್ಮ ತಿಮ್ಮಾಪುರ, ಮನೋಜ್ ದೇವರಮನಿ, ಸಿದ್ದಯ್ಯಸ್ವಾಮಿ ಮಾಚನಾಳ, ವೀರು ಹೂಗಾರ, ಮಲ್ಲಿಕಾರ್ಜುನ, ರಾಜೇಶ್ವರಿ ಮಾನ್ವಿ, ದೀಪ ಮುಧೋಳ, ನರಸಮ್ಮ, ವಿಶಾಲಾಕ್ಷಿ, ಬ್ರಮರಾಂಬ ಆಶಾ, ಶ್ಯಾಮೀದ್, ಸಲೀಂ, ವಿನೋದ, ಗಣೇಶ, ಸುದರ್ಶನ್, ವೀರೇಶ ಕೊಟ್ನೆಕಲ್, ಸೇರಿದಂತೆ ಅನೇಕರು ಸಂಗೀತ ಆರಾಧಕರು ಇದ್ದರು.

## ನೇಮಕಾತಿ ಪ್ರಕಟಣೆ

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ 3395 ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಹುದ್ದೆಗಳ ನೇಮಕಾತಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಮಿಕ್ಕುಳಿದ ವೃಂದದಲ್ಲಿನ ವಿವಿಧ ಜಿಲ್ಲಾ, ನಗರ ಹಾಗೂ ಘಟಕಗಳಲ್ಲಿ ಖಾಲಿ ಇರುವ 3395 ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಹುದ್ದೆಗಳ ನೇರ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ನೇಮಕಾತಿಯ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಲಿದ್ದು, ಅಭ್ಯರ್ಥಿಗಳು ದೈಹಿಕ ಪರೀಕ್ಷೆ ಹಾಗೂ ಇತರ ಅ ಪ್ರಕ್ರಿಯೆಗಳಲ್ಲಿ ಭಾಗವಹಿಸಬಹುದು

ವೆಬ್ ಸೈಟ್ https://cetonline.karnataka.gov.in/kea ನೀಡಲಾಗುವ ಲಿಂಕ್ ಅನ್ನು ಆಯ್ಕೆ ಮಾಡಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಭರ್ತಿ ಮಾಡಬೇಕು. ಕೊನೆಯ ದಿನಾಂಕ : ಜುಲೈ– 3–2026

## ಜನರ ಒಳಿತಿಗಾಗಿ ಒಟ್ಟಾಗಿ ಕೆಲಸ ಮಾಡೋಣ, ರಾಜಕಾರಣ ಮಾಡುವುದು ಬೇಡ : ಸಿಎಂ ಡಿಕೆಶಿ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯದ ಜನರ ಒಳಿತಿಗಾಗಿ ಎಲ್ಲರೂ ಸೇರಿ ಒಟ್ಟಾಗಿ ಕೆಲಸ ಮಾಡೋಣ. ರಾಜಕಾರಣ ಮಾಡುವುದು ಬೇಡ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲಹೆ ನೀಡಿದ್ದಾರೆ. ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ 44ನೇ ಪುಣ್ಯಸರಣೆ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಡಿ.ಕೆ.ಶಿವಕುಮಾರ್ ಸುದ್ದಿಗಾರರೊಂದಿಗೆ ಮಾತನಾಡಿದರು.



ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತದಿಂದ ಜನ ಸಂಕಷ್ಟಕ್ಕೊಳಗಾಗಿದ್ದಾರೆ ಎಂದು ಪ್ರಧಾನಿ ನಿನ್ನೆ ಟೀಕಿಸಿದ್ದರು. ಇದಕ್ಕೆ ಇಂದು ತಾಳೆಯಿಂದಲೇ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಅವರು, ಪ್ರಧಾನಿಯವರು ತಾವು ಮುಖ್ಯಮಂತ್ರಿಯಾದಾಗ ಅಭಿನಂದಿಸಿದ್ದಾರೆ, ನಾನು ಅದಕ್ಕೆ ಧನ್ಯವಾದ ಹೇಳಿದ್ದೇನೆ. ಮುಂದಿನ ದಿನಗಳಲ್ಲಿ ಅವರನ್ನು ಗೌರವಯುತವಾಗಿ ಭೇಟಿ ಮಾಡುತ್ತೇನೆ. ಅವರೂ ರಾಜಕಾರಣ ಮಾಡುವುದು ಬೇಡ, ನಾವೂ ರಾಜಕಾರಣ ಮಾಡುವುದಿಲ್ಲ. ರಾಜ್ಯದ ಜನರ ಒಳಿತಿಗಾಗಿ ಒಟ್ಟಾಗಿ ಕೆಲಸ ಮಾಡೋಣ ಎಂದು ಹೇಳಿದರು. ಷಸಚಿವ ರಾಮಲಿಂಗಾರೆಡ್ಡಿ ನನ್ನ ಸ್ನೇಹಿತರು, ಅವರ ಜೊತೆ ಚರ್ಚೆ ಮಾಡಿದ್ದೇನೆ. ವಾಟ್ಸಾಪ್‌ನಲ್ಲಿ ರಾಜೀನಾಮೆ ಕಳುಹಿಸಿದ್ದರು. ಈಗ ಅದು ಇತ್ಯರ್ಥವಾಗಿದೆ ಎಂದಿದ್ದಾರೆ. ದೇವರಾಜ ಅರಸು ಅವರು, ಅರಸು ಮನೆತನಕ್ಕೆ ಸೇರಿದ್ದರೂ ಕೂಡ ವಿವಿಧ ಜಾತಿಗಳಲ್ಲಿನ ನಾಯಕರನ್ನು ಬೆಳೆಸಿದ್ದಾರೆ. ಬೆಂಗಳೂರಿನಲ್ಲಿ ಎಲೆಕ್ಟ್ರಾನಿಕ್ ಸಿಟಿ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ್ದು, ದೇವರಾಜ ಅರಸು ಅವರು. ವೀರಪ್ಪಮೊಯ್ಲಿ, ಎಸ್.ಎಂ.ಕೃಷ್ಣ ಆಗ ಸಚಿವರಾಗಿದ್ದರು ಎಂದು ಹೇಳಿದರು.

ಅರಸು ಅವರ ಕೆಲಸಗಳು 100 ವರ್ಷಗಳಾದರೂ ನಮ ನಡುವೆ ಚಿರಸ್ಥಾಯಿಯಾಗಿರುತ್ತವೆ. ಅವರ ಸೇವೆ ಮತ್ತು ಸಾಕ್ಷಿಗುಡ್ಡೆ ನಮ ಮುಂದಿದೆ. ಇಂದಿರಾಗಾಂಧಿ ಅವರ ಮಾರ್ಗದರ್ಶನದಲ್ಲಿ ಅರಸು ಅವರ ನಾಯಕತ್ವದಲ್ಲಿ ಉಳುವವನೇ ಭೂಮಿ ಒಡೆಯ ಕಾಯ್ದೆ ದೇಶಕ್ಕೆ ಮಾದರಿಯೆಂಬಂತೆ ಕರ್ನಾಟಕದಲ್ಲಿ ಅನುಷ್ಠಾನಕ್ಕೆ ಬಂದಿದೆ ಎಂದು ಹೇಳಿದರು. ಅರಸು ಅವರ ಮಾರ್ಗದರ್ಶನದಲ್ಲಿ ಅವರ ಆಶಯಗಳಂತೆ ನಮ ಸರ್ಕಾರ ಕೆಲಸ ಮುಂದುವರೆಸಲಿದೆ ಎಂದು ಸ್ಪಷ್ಟಪಡಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಆತ್ಮನಿರ್ಭರ ಭಾರತ ಮಿಷನ್ ಅಡಿಯಲ್ಲಿ ರೈತರಿಗೆ ದ್ವಿದಳ ಬಿತ್ತನೆ ಬೀಜ ವಿತರಣೆ

ನೈಜ್ಯ ದೆಸೆ ನ್ಯೂಸ್

ರಾಯಚೂರು ಜೂನ್ 06 (ಕರ್ನಾಟಕ ವಾರ್ತೆ): ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಆತ್ಮನಿರ್ಭರ ಭಾರತ ದ್ವಿದಳ ಧಾನ್ಯಗಳ ಮಿಷನ್ ಅಡಿಯಲ್ಲಿ ತಾಲ್ಲೂಕಿನ ಅರ್ಹ ರೈತರಿಗೆ ಉಚಿತ ದ್ವಿದಳ ಧಾನ್ಯಗಳ ಬೀಜದ ಕಿಟ್‌ಗಳನ್ನು ರಾಯಚೂರಿನ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರದಲ್ಲಿ ಶನಿವಾರ ವಿತರಿಸಲಾಯಿತು.

ಕಾರ್ಯಕ್ರಮಕ್ಕೆ ರಾಯಚೂರಿನ ಉಪ ಕೃಷಿ ನಿರ್ದೇಶಕರಾದ ನಯೀಮ್ ಹುಸೇನ್ ಅವರು ಚಾಲನೆ ನೀಡಿ ಮಾತನಾಡಿದ ಅವರು, ದೇಶದಲ್ಲಿ ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚಿಸಿ ರೈತರ ಆದಾಯವನ್ನು ವೃದ್ಧಿಸುವುದು ಸದರಿ ಯೋಜನೆಯ ಉದ್ದೇಶವಾಗಿದೆ. ದ್ವಿದಳ ಧಾನ್ಯ ಮಣ್ಣಿನ ಫಲವತ್ತತೆ ಹೆಚ್ಚಿಸುವುದರ ಜೊತೆಗೆ ಜನರ ಪೌಷ್ಟಿಕಾಂಶ ಭದ್ರತೆಯಲ್ಲಿಯೂ ಪ್ರಮುಖ ಪಾತ್ರ ವಹಿಸಲಿದೆ. ಕಾರಣ ರೈತರು ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಂಡು ವೈಜ್ಞಾನಿಕ ಕೃಷಿ



ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಕೃಷಿಯನ್ನು ಲಾಭದಾಯಕ ಉದ್ಯಮವಾಗಿ ಪರಿವರ್ತಿಸುವಂತೆ ಮನವಿ ಮಾಡಿಕೊಂಡರು.

ಈ ವೇಳೆ ರಾಯಚೂರು ತಾಲೂಕು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ದೀಪಾ ಎಲ್., ಅವರು ಮಾತನಾಡಿ, ದ್ವಿದಳ ಧಾನ್ಯಗಳ ಬೇಡಿಕೆ ಹೆಚ್ಚುತ್ತಿದ್ದು, ರೈತರು ಸುಧಾ–ರಿತ ತಳಿಗಳ ಅಳವಡಿಕೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಅವರುಹೇಳಿದರು. ಅಧಿಕ ಇಳುವರಿ ನೀಡುವ, ಹವಾಮಾನ ವೈಪ–ರೀತ್ಯಗಳನ್ನು ಸಹಿಸಬಲ್ಲ, ಕೀಟ ಹಾಗೂ ರೋಗ ನಿರೋಧಕ ಗುಣಗಳನ್ನು ಹೊಂದಿರುವ ಪ್ರಮಾಣಿತ ಬೀಜಗಳನ್ನು ರೈತರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ. ಮುಂಗಾರು ಹಂಗಾಮಿನ ಬಿತ್ತನೆಗೆ ಪೂರಕವಾಗಿ ಬಿತ್ತನೆ ಬೀಜಗಳನ್ನು ಹಾಗೂ ರಸಗೊಬ್ಬರಗಳನ್ನಯ ಅಗತ್ಯವಿರುವಷ್ಟು ದಾಸ್ತಾನು ಮಾಡಿಕೊಳ್ಳಲಾಗಿದೆ.

ಕೆ.ಕಿಸಾನ್ ತಂತ್ರಾಂಶದ ಮೂಲಕ ಫ್ರೂಟ್ಸ್ ಎಫ್‌ಐಡಿ ಆಧಾರಿತವಾಗಿ ಯೂರಿಯಾ ರಸಗೊಬ್ಬರ ವಿತರಣೆ ಕಡ್ಡಾಯಗೊಳಿಸಲಾಗಿದೆ. ಯೂರಿಯಾಕ್ಕೆ ಪಯಾಯವಾಗಿ ಸಂಯುಕ್ತ ಗೊಬ್ಬರಗಳ ಬಳಕೆ ಮಾಡವ ಕುರಿತು ರೈತ–ರಿಗೆ ಜಾಗೃತಿಯನ್ನು ಮೂಡಿಸಲಾಯಿತು. ಇದೇ ಸಂದರ್ಭದಲ್ಲಿ ರೈತ ಸಂಘದ ಅಧ್ಯಕ್ಷ ಲಕ್ಷ್ಮಣ ಗೌಡ ಕಡಗಮದೊಡ್ಡಿ ಸೇರಿದಂತೆ ರೈತ ಉತ್ಪಾದಕ ಸಂಸ್ಥೆಯ ಪ್ರತಿನಿಧಿಗಳು, ಪ್ರಗತಿ ಪರ ರೈತರು ಕಾರ್ಯಕ್ರಮದಲ್ಲಿ ಇದ್ದರು.

# ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಜನಸಾಮಾನ್ಯರ ಮೂಲ ಸೌಕರ್ಯಗಳಿಗೆ ಮೊದಲ ಆದ್ಯತೆ : ಹಂಪನಗೌಡ ಬಾದರ್ಲಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಜನಸಾಮಾನ್ಯರ ಮೂಲಸೌಕರ್ಯಗಳಿಗೆ ಮೊದಲ ಆದ್ಯತೆ ನೀಡಲಾಗುತ್ತಿದ್ದು, ಗುಣಮಟ್ಟದ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಅಧಿಕಾರಿಗಳು ಬದ್ಧರಾಗಿರಬೇಕು ಎಂದು ಸಿಂಧನೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ ಸಾಹೇಬರು ಕಟ್ಟುನಿಟ್ಟಿನ ಸೂಚನೆ ನೀಡಿದರು.ಅವರು ಇಂದು ಕ್ಷೇತ್ರ ವ್ಯಾಪ್ತಿಯ ವಿವಿಧ ಪ್ರಮುಖ ಅಭಿವೃದ್ಧಿ ಕಾಮಗಾ–ರಿಗಳ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಪ್ರಗತಿ** ಪರಿಶೀಲನೆ ನಡೆಸಿದ ಬಳಿಕ ಮಾತನಾಡಿದರು.

ಸಿಂಧನೂರು ನಗರದ ಜನತೆಗೆ ಶಾಶ್ವತವಾಗಿ ಕುಡಿಯುವ ನೀರು ಒದಗಿಸುವ ಮಹತ್ವಾಕಾಂಕ್ಷೆಯ ಯೋಜನೆಯ ಭಾಗವಾಗಿ, ತುರವಿಹಾಳ್ ಗ್ರಾಮದ ಸಮೀಪ ಎಸ್–ಎಫ್‌ಸಿ (SFC) ಹಾಗೂ ಕೆಕೆಆರ್‌ಡಿಬಿ (KKRDB) ಅನುದಾನದಡಿ ಹಮ್ಮಿಕೊಳ್ಳಲಾಗಿರುವ ?20 ಕೋಟಿ ವೆಚ್ಚದ ಹೊಸ ಕೆರೆ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಶಾಸಕರು ಭೇಟಿ ನೀಡಿದರು.

ಕಾಮಗಾರಿಯ ಪ್ರಗತಿಯನ್ನು





ಸೂಕ್ಷ್ಮವಾಗಿ ವೀಕ್ಷಿಸಿದ ಶಾಸಕರು, "ಇದು ಸಿಂಧನೂರು ನಗರದ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಮುಕ್ತಿ ನೀಡುವ ನಿಟ್ಟಿನಲ್ಲಿ ಇಟ್ಟಿರುವ ಅತ್ಯಂತ ಮಹತ್ವದ ಹೆಜ್ಜೆಯಾಗಿದೆ. ಇದರಲ್ಲಿ ಯಾವುದೇ ರೀತಿಯ ವಿಳಂಬ ಧೋರಣೆಯನ್ನು ಸಹಿಸುವುದಿಲ್ಲ. ಕಾಮಗಾ–ರಿಯನ್ನು ಅತ್ಯಂತ ತ್ವರಿತವಾಗಿ ಹಾಗೂ ಯಾವುದೇ ಲೋಪವಿಲ್ಲದೆ ಅತ್ಯುನ್ನತ ಗುಣಮಟ್ಟದೊಂದಿಗೆ ಪೂರ್ಣಗೊಳಿಸಬೇಕು" ಎಂದು ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರ–ರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಇದಾದ ನಂತರ, ಶಾಸಕರು ಸಿಂಧನೂರು ನಗರದ ಹೊರವಲಯದಲ್ಲಿ ಭರದಿಂದ ಸಾಗುತ್ತಿರುವ ವೀರಶೈವ ಕಲ್ಯಾಣ ಮಂಟಪದ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಇಂಜಿನಿಯರ್‌ಗಳು ಹಾಗೂ ಅಧಿಕಾರಿಗಳಿಂದ ಕಾಮಗಾರಿಯ ಹಾಲಿ ಪ್ರಗತಿ ಮತ್ತು ಮುಂದಿನ ಹಂತಗಳ ಕುರಿತು ಸವಿವರವಾದ ಮಾಹಿತಿ ಪಡೆದುಕೊಂಡರು.

ಬಳಿಕ ಮಾತನಾಡಿದ ಅವರು, "ಸಾರ್ವಜನಿಕರ ಹಾಗೂ ಜನಸಾಮಾನ್ಯರ ಅನುಕೂಲಕ್ಕಾಗಿ ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಈ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗುತ್ತಿದೆ. ಇದು ಈ ಭಾಗದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ದೊಡ್ಡ ಕೊಡುಗೆಯಾಗಲಿದೆ. ಗುಣಮಟ್ಟಕ್ಕೆ ಮೊದಲ ಆದ್ಯತೆ ನೀಡಿ, ನಿಗದಿಪಡಿಸಿದ ಕಾಲಮಿತಿಯೊಳಗೆ ಭವನವನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ವಿವಿಧ ಇಲಾಖೆಯ ಹಿರಿಯ ಅಧಿಕಾ–ರಿಗಳು, ಪ್ರಮುಖ ಮುಖಂಡರು ಹಾಗೂ ಗುತ್ತಿಗೆದಾರರು ಉಪಸ್ಥಿತರಿದ್ದರು.

# ಸಿಂಧನೂರಿನಲ್ಲಿ ವನಸಿರಿ ಪೌಂಡೇಷನ್ ನಿಂದ ವಿಶ್ವ ಪರಿಸರ ದಿನಾಚರಣೆಗೆ ಚಾಲನೆ



ನೈಜ್ಯ ದೆಸೆ ನ್ಯೂಸ್

**ಮಾನವನ ದುರ್ಬುದ್ಧಿ,ಸ್ವಹಿತಾಸಕ್ತಿಗೆ ಅರಣ್ಯ ನಾಶ ಹೆಚ್ಚಾಗುತ್ತಿದೆ.ಪರಿಸರ ರಕ್ಷಣೆಯಿಂದ ನಾವೆಲ್ಲರೂ ಇಂದಿನ ದಿನಮಾನಗಳಲ್ಲಿ ದೂರವಾಗುತ್ತಿದ್ದೇವೆ.ಇದರಿಂದ ಮನುಕುಲದ ಮೇಲೆ ದುಷ್ಪರಿಣಾಮ ಬೀರುತ್ತಿದೆ.ಪ್ರಕೃತಿ ರಕ್ಷಣೆಗೆ ನಾವೆಲ್ಲರೂ ಮುಂದಾದರೆ ಮಾತ್ರ ಉತ್ತಮ ವಾತಾವರಣ ಸೃಷ್ಟಿಸಲು ಸಾಧ್ಯ ಎಂದು ಪರಿಸರ ಪ್ರೇಮಿ ಎಂ ಅಮರೇಗೌಡ ವಕೀಲರು ತಿಳಿಸಿದರು.**

ಸಿಂಧನೂರು ನಗರದ ಸರಕಾರಿ ಬಾಲಕಿಯರ ಪ್ರೌಢ ಶಾಲೆಯಲ್ಲಿ ವನಸಿರಿ ಪೌಂಡೇಷನ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮಕ್ಕೆ ಪರಿಸರ ಪ್ರೇಮಿ ಎಂ.ಅಮರೇಗೌಡ ವಕೀಲರು ಸಸಿನೆಟ್ಟು ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಸಸಿ ನೆಟ್ಟು ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.ಪ–ರಿಸರ ನಾಶದಿಂದ ಜೀವಸಂಕುಲ ಹತ್ತು ಹಲವು ಸಂಕಷ್ಟಗಳಿಗೆ ತುತ್ತಗುತ್ತಿದೆ.ಮನುಷ್ಯನ ಜೀವನ ಉತ್ತಮವಾಗಿರಬೇಕಾದರೆ ಮೊದಲು ಪ್ರಕೃತಿ ಮಾತೆಯ ರಕ್ಷಣೆಗೆ ನಾವೆಲ್ಲರೂ ಮುಂದಾಗಬೇಕು.ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ.ಅಮರೇಗೌಡ ಮಲ್ಲಾಪುರ ನೇತೃತ್ವದಲ್ಲಿ ವನಸಿರಿ ಪೌಂಡೇಷನ್ ತಂಡ ಪ್ರತಿ ದಿನ ಹಗಲಿರುಳು ಎನ್ನದೆ ಪರಿಸರ ರಕ್ಷಣೆಗೆ ಮುಂದಾಗಿದೆ ನಿಜಕ್ಕೂ ಅಮರೇಗೌಡ ಮಲ್ಲಾಪುರ ಅವರ ಕಾರ್ಯ ಶ್ಲಾಘನೀಯ. ಇಂತಹ ಕಾರ್ಯ ಇನ್ನೂ ಹೆಚ್ಚು ಹೆಚ್ಚು ನಡೆಯಲಿ.ವನಸಿರಿ ತಂಡದೊಂದಿಗೆ ಪರಿಸರ ರಕ್ಷಣೆ ಮಾಡಲು ನಾವೆಲ್ಲರೂ ಕೈಜೋಡಿಸೋಣ ಎಂದರು.

ಈ ಸಂಧರ್ಭದಲ್ಲಿ ಭೀಮನಗೌಡ ವಕೀಲರ ಸಂಘದ ಅಧ್ಯಕ್ಷರು,ರಾಜ್ಯ ಪ್ರಶಸ್ತಿ ಪುರಸ್ಕೃತ ಹಾಗೂ ವನಸಿರಿ ಪೌಂಡೇಷನ್ ಅಧ್ಯಕ್ಷ ಅಮರೇಗೌಡ ಮಲ್ಲಾಪುರ,ಅರಣ್ಯ ಇಲಾಖೆ ಅಧಿಕಾರಿಗಳು ಬಸನಗೌಡ ಅಲ್ಲಿಪೂರ್,ಅ–ರಣ್ಯ ಇಲಾಖೆ ವಿಜಯಕುಮಾರ,ಡಾ.ನವೀನ್ ಕುಮಾರ,ಬಸವರಾಜ ಸಾಹುಕಾರ ವಕೀಲರು,ಮುಖ್ಯ ಶಿಕ್ಷಕಿ ಶ್ರೀಮತಿ ಅಡಿವೆಮ್ಮಾ,ಸಂತೋಷ್ ಅಂಗಡಿ ನಗರಸಭೆ ಇಲಾಖೆ ವೆಂಕಟೇಶ,ಪ–ರಿಸರ ಚೇತನ್,ಮಂಜುನಾಥ ಗಾಣಗೇರ, ಚನ್ನಪ್ಪ ಕೆ ಹೊಸಹಳ್ಳಿ,ರಾಜು ಬಳಗಾನೂರ ಇನ್ನಿತರರು ಇದ್ದರು.

# ಪ್ರತಿ ಮಗುವಿಗೂ ಪಲ್ಸ್ ಪೋಲಿಯೋ ಲಸಿಕೆ ಹಾಕಿಸಿ: ಉಪ ಆಯುಕ್ತ ಶರಣಪ್ಪ

ನೈಜ್ಯ ದೆಸೆ ನ್ಯೂಸ್

**ರಾಯಚೂರು ಜೂನ್ 06 (ಕರ್ನಾಟಕ ವಾರ್ತೆ):ಜಿಲ್ಲೆಯಲ್ಲಿ ಜೂನ್ 28ರಂದು ನಡೆಯುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನದಡಿ ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಶಿಸ್ತುಬದ್ಧವಾಗಿ ನಡೆಸಬೇಕು ಎಂದು ಮಹಾನಗರ ಪಾಲಿಕೆ ಕಂದಾಯ ವಿಭಾಗದ ಉಪ ಆಯುಕ್ತ ಶರಣಪ್ಪ ಅವರು ಹೇಳಿದರು.**

ಜೂನ್ 06ರ ಶನಿವಾರ ದಂದು ನಗರದ ಮಹಾನಗರ ಪಾಲಿಕೆಯ ಕಚೇ–ರಿಯ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈಗಾಗಲೆ ಪೋಲಿಯೋ ಮುಕ್ತ ಭಾರತದ ವಿಜಯವನ್ನು ಮುಂದುವರೆಸಲು ರಾಯಚೂರು ನಗರದ ಸೇರಿದಂತೆ ತಾಲೂಕಿನಾದ್ಯಂತ ಜೂನ್ 28ರ ಭಾನುವಾರ ಪೋಲಿಯೋ ಲಸಿಕೆ ಹಾಕಿಸಲು ಇಂದಿನಿಂದಲೇ ವ್ಯಾಪಕ ಪ್ರಚಾರ ಮಾಡೋಣವೆಂದರು.



ನಗರ ಪ್ರದೇಶದಲ್ಲಿ 37,983 ಮಕ್ಕಳಿಗೆ ಲಸಿಕೆ ಹಾಕಲು ಜನನೀಬಿಡ ಪ್ರದೇಶವಾದ ಸಂತೆ ಮಾರುಕಟ್ಟೆ, ರೈಲು ನಿಲ್ದಾಣ, ಬಸ್ ನಿಲ್ದಾಣ ಮುಂತಾದವುಗಳಲ್ಲಿ ಲಸಿಕೆ ಹಾಕಲು 9 ಟ್ರಾನ್ಸಿಟ್ ತಂಡಗಳು, 01 ಸಂಚಾರಿ ತಂಡ ಹಾಗೂ ಮನೆ ಬೇಟಿಗಾಗಿ 146 ತಂಡಗಳು ಕಾರ್ಯನಿರ್ವಹಿಸುತ್ತಿರುವದಕ್ಕೆ ಬೆಂಬಲವಾಗಿ ನಗರದಲ್ಲಿ ಪ್ರಚಾರಕ್ಕಾಗಿ ತ್ಯಾಜ್ಯ ವಿಲೇವಾರಿ ವಾಹನಗಳ ಮೂಲಕ ಜಿಂಗಲ್ಸ್ ಹಾಗೂ ಬ್ಯಾನರ್, ಪ್ಲೇಕ್ಸ್ ಅಳವಡಿಕೆ, ತಂಡದ ಸದಸ್ಯರಿಗೆ ಅಹಾರ ಪೊಟ್ಟಣ ವಿತರಣೆ ಕೈಗೊಳ್ಳಲಾಗುವುದು. ಅಲ್ಲದೆ ಮಹಾನಗರ ಪಾಲಿಕೆಯಡಿ ಆಯುಕ್ತರ ಮಾರ್ಗದರ್ಶನದಲ್ಲಿ ಎಲ್ಲ ಸಹಕಾರ ನೀಡಲಾಗುವುದು ಎಂದರು. ಈ ವೇಳೆ ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ ಅವರು ಮಾತನಾಡಿ, ಗ್ರಾಮೀಣ ಭಾಗದಲ್ಲಿ 76,502 ಮಕ್ಕಳಿಗೆ ಲಸಿಕೆ ಹಾಕಲು ಜನನೀಬಿಡ ಪ್ರದೇಶವಾದ ಸಂತೆ ಮಾರುಕಟ್ಟೆ, ಬಸ್ ನಿಲ್ದಾಣ ಮುಂತಾದವುಗಳಲ್ಲಿ ಲಸಿಕೆ ಹಾಕಲು 16 ಟ್ರಾನ್ಸಿಟ್ ತಂಡಗಳು ಹಾಗೂ ವಲಸೆ ಪ್ರದೇಶ, ಕಟ್ಟಡ ಕಾಮಗಾರಿ, ಇಟ್ಟಿಗೆ ಬಟ್ಟಿ, ಕಬ್ಬು ಕಡೆಯುವ ಜಾಗೆ, ಕುರಿಹಟ್ಟಿ, ಕೊಳಚೆ ಪ್ರದೇಶ, ತೋಟದ ಮನೆ, ಮುಂತಾದ ಸ್ಥಳಗಳಲ್ಲಿರುವ ಲಸಿಕೆ ಹಾಕಲು 03 ಸಂಚಾರಿ ತಂಡ ಹಾಗೂ ಮನೆ ಬೇಟಿಗಾಗಿ 316 ತಂಡಗಳು ಕಾರ್ಯ ನಿರ್ವಹಿಸುತ್ತಿದ್ದು, ಬೆಂಬಲವಾಗಿ ಗ್ರಾಮೀಣ ಪ್ರದೇಶದಲ್ಲಿ ಪ್ರಚಾರಕ್ಕಾಗಿ ಗ್ರಾಮ ಪಂಚಾಯತಗಳ ತ್ಯಾಜ್ಯ ವಿಲೇವಾರಿ ವಾಹನಗಳ ಮೂಲಕ ಜಿಂಗಲ್ಸ್ ಅಂಗನವಾಡಿ ಪೂರ್ವ ಪ್ರಾಥಮಿಕ ಹಂತದ ಎಲ್ಲ ನರ್ಸರಿ, ಕಿಡರ್ ಗಾರ್ಟನ್, ಬೆಬಿ ಸಿಟ್ಟಿಂಗ್‌ನಲ್ಲಿಯ ಮಕ್ಕಳಿಗೆ ಎರಡು ದಿನ ಮೊದಲು ಲಸಿಕೆ ಹಾಕಲು ಸಿದ್ದತೆ ಕೈಗೊಳ್ಳಲು ನಿರ್ದೇಶನ ನೀಡಲಾಯಿತು.

ಶಾಲೆ, ಅಂಗನವಾಡಿಗಳಲ್ಲಿ ಬೂತ್ ಇರುವ ಸ್ಥಳಗಳಲ್ಲಿ ಮೊದಲೆ ಸ್ವಚ್ಚಗೊಳಿಸಿಡಲು ಸಂಬಂಧಿಸಿದವರು ಕ್ರಮವಹಿಸಲು ಹಾಗೂ ಶಾಲಾ ಮಕ್ಕಳ ಜಾಥಾ ಹಮ್ಮಿಕೊಳ್ಳಲು ತಹಶೀಲ್ದಾರರು ಸೂಚಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಹಾಗೂ ಪಾಲಿಕೆಯ ಅರೋಗ್ಯ ಅಧಿಕಾರಿ ಡಾ ಮಹಮ್ಮದ್ ಶಾಕೀರ್, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ. ಚಂದ್ರಶೇಖರಯ್ಯ ಸ್ವಾಮಿ, ತಾಲೂಕಾ ಆರೋಗ್ಯಾಧಿಕಾರಿ ಡಾ.ಅಮೃತ ಹುಕ್ಕೇರಿ, ಪರಿಸರ ಅಭಿಯಂತರರು ಜಯಪಾಲರೆಡ್ಡಿ, ಆಯುಷ್ ಇಲಾಖೆಯ ಡಾ.ಪೂಜಾ, ಜಿಲ್ಲಾ ಅರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಶಿಕ್ಷಣ ಇಲಾಖೆಯ ಟಿಪಿಓ ಭಾಸ್ಕರ್ ಕುಮಾರ್, ಡಿವೈಹೆಚ್‌ಇಓ ಬಸಯ್ಯ, ಐಸಿಡಿಎಸ್‌ನ ಚನ್ನಮ್ಮ, ಆರ್‌ಟಿಓ ಕಚೇರಿಯ ಅರ್ಜುನ ಚೌವ್ಹಾಣ್, ಬಿಸಿಎಮ್ ಇಲಾಖೆಯ ಈರಣ್ಣ ಪತ್ತಾರ, ಹಿರಿಯ ಹೆಚ್‌ಐಓ ಸುರೇಶ, ಬಿಹೆಚ್‌ಇಓ ಸರೋಜಾ ಕೆ, ಹಿರಿಯ ಪಿಹೆಚ್‌ಸಿಓ ಈರಮ್ಮ, ಪಾಲಿಕೆ ನೈರ್ಮಲ್ಯ ನೀರಿಕ್ಷಕರಾದ ತಿಕ್ಕಾರೆಡ್ಡಿ, ರಾಮಚಂದ್ರ, ಆಕಾಶ ಪಾಟೀಲ್, ಬಿಪಿಎಮ್ ವರಲಕ್ಷ್ಮಿ, ನಂದಿನಿ ಕಾಲೇಜಿನ ಎಸ್ ರೇಹಾನ್, ಎಮ್‌ಟಿಎಸ್ ಸಂಧ್ಯಾ, ಹಾಗೂ ಆರ್‌ಸಿಹೆಚ್ ವಿಭಾಗದ ರವಿ, ನರೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಮೆಕ್ಯಾನಿಕ್ ಟ್ರಾಕ್ಟರ್

ಒಂದು ವರ್ಷದ ತರಬೇತಿ ಅವಧಿಯಲ್ಲಿ ಅಭ್ಯರ್ಥಿಗೆ ಉದ್ಯೋಗ ಸಂಬಂಧಿತ ವೃತ್ತಿಪರ ಕೌಶಲ್ಯ (Professional Skill), ವೃತ್ತಿಪರ ಜ್ಞಾನ (Professional Knowledge) ಹಾಗೂ ಉದ್ಯೋಗಾರ್ಹತಾ ಕೌಶಲ್ಯ (Employability Skill) ವಿಷಯಗಳಲ್ಲಿ ತರಬೇತಿ ನೀಡಲಾಗುತ್ತದೆ. ಇದರ ಜೊತೆಗೆ, ಅಭ್ಯರ್ಥಿಯ ಆತ್ಮವಿಶ್ವಾಸವನ್ನು ವೃದ್ಧಿಸಲು ಯೋಜನಾ ಕಾರ್ಯಗಳು (Project Work) ಹಾಗೂ ಪಠ್ಯೇತರ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಮಾಡಲಾಗುತ್ತದೆ. ಪ್ರಾಯೋಗಿಕ ಕೌಶಲ್ಯಗಳನ್ನು ಸರಳದಿಂದ ಸಂಕೀರ್ಣ ಹಂತದವರೆಗೆ ಕಲಿಸಲಾಗುತ್ತದೆ ಮತ್ತು ಅದಕ್ಕೆ ಅನುಗುಣವಾಗಿ ಸೈದ್ಧಾಂತಿಕ ವಿಷಯಗಳನ್ನೂ ಬೋಧಿಸಲಾಗುತ್ತದೆ, ಇದರಿಂದ ಅಭ್ಯರ್ಥಿಗಳು ಕಾರ್ಯನಿರ್ವಹಿಸುವಾಗ ತಮ್ಮ ಜ್ಞಾನವನ್ನು ಪರಿಣಾಮಕಾರಿಯಾಗಿ ಅನ್ವಯಿಸಬಹುದು.

ಕಾರ್ಯಾಗಾರದಲ್ಲಿ ಮೂಲ ಫಿಟ್ಟಿಂಗ್ (Fitting) ಕಾರ್ಯಾಚರಣೆಗಳಿಗಾಗಿ ಭಾಗಗಳ ಮೇಲೆ ಗುರುತು ಹಾಕುವ (Marking) ವಿಧಾನಗಳನ್ನು ಕಲಿಯುವುದು.

ಭಾಗಗಳ ನಿಖರ ಅಳತೆಗಳನ್ನು (Precision Measurements) ತೆಗೆದು, ಅವುಗಳನ್ನು ನಿರ್ದಿಷ್ಟ ಮಾನದಂಡಗಳೊಂದಿಗೆ ಹೋಲಿಕೆ ಮಾಡುವುದು.

ವಾಹನ ಕಾರ್ಯಾಗಾರಗಳಲ್ಲಿ ಬಳಸುವ ವಿವಿಧ ರೀತಿಯ ಉಪಕರಣಗಳು ಮತ್ತು ಯಂತ್ರೋಪಕರಣಗಳನ್ನು ಬಳಸುವುದು.

ವಾಹನಗಳಲ್ಲಿ ಬಳಸುವ ವಿವಿಧ ಬಗೆಯ ಜೋಡಣೆ (Fastening) ಮತ್ತು ಲಾಕ್ ಮಾಡುವ ಸಾಧನಗಳನ್ನು ಗುರುತಿಸಿ ಬಳಸುವುದು.ಮೂಲ ಫಿಟ್ಟಿಂಗ್ ಕಾರ್ಯಗಳು ಹಾಗೂ ಅಳತೆ ಪರಿಶೀಲನೆ (Inspection) ಕಾರ್ಯಗಳನ್ನು ನಿರ್ವಹಿಸುವುದು.

ವಿವಿಧ ಶೀಟ್ ಮೆಟಲ್ (Sheet Metal) ಕಾರ್ಯಾಚರಣೆಗಳ ಮೂಲಕ ಶೀಟ್ ಮೆಟಲ್ ಭಾಗಗಳನ್ನು ತಯಾರಿಸುವುದು.

ವಿನಾಶರಹಿತ ಪರೀಕ್ಷಾ ವಿಧಾನಗಳ (Non-Destructive Testing - NDT) ಮೂಲಕ ವಾಹನ ಭಾಗಗಳನ್ನು ಪರಿಶೀಲಿಸುವುದು.

ವಿವಿಧ ವೆಲ್ಡಿಂಗ್ (Welding) ವಿಧಾನಗಳನ್ನು ಬಳಸಿ ಅಗತ್ಯ ಭಾಗಗಳನ್ನು ತಯಾರಿಸುವುದು.

ವಾಹನದಲ್ಲಿರುವ ಹೈಡ್ರಾಲಿಕ್ ಮತ್ತು ನ್ಯೂಮ್ಯಾಟಿಕ್ ಘಟಕಗಳನ್ನು ಗುರುತಿಸುವುದು.

ವಿದ್ಯುತ್ ವಲಯಗಳನ್ನು (Electrical Circuits) ನಿರ್ಮಿಸಿ, ವಿದ್ಯುತ್ ಅಳತೆ ಸಾಧನಗಳ ಮೂಲಕ ಅವುಗಳ ಮೌಲ್ಯಗಳನ್ನು ಪರೀಕ್ಷಿಸುವುದು ಹಾಗೂ ವಾಹನಗಳಲ್ಲಿ ಮೂಲಭೂತ ವಿದ್ಯುತ್ ಪರೀಕ್ಷೆಗಳನ್ನು ನಡೆಸುವುದು.

ಅಭ್ಯರ್ಥಿಯು ಕೆಳಗಿನ ಟ್ರ್ಯಾಕ್ಟರ್ ಸಂಬಂಧಿತ ಕಾರ್ಯಗಳಲ್ಲಿಯೂ ಪರಿಣತಿ. ಟ್ರ್ಯಾಕ್ಟರ್‌ನ ಪ್ರಮುಖ ಜೋಡಣೆ ಘಟಕಗಳನ್ನು (Major Assemblies) ಗುರುತಿಸಿ ವಿವರಿಸುವುದು.

ಟ್ರ್ಯಾಕ್ಟರ್‌ನ ಡೀಸೆಲ್ ಎಂಜಿನ್ ಅನ್ನು ಸಂಪೂರ್ಣವಾಗಿ ದುರಸ್ತಿ (Overhaul) ಮಾಡುವುದು.

ಟ್ರ್ಯಾಕ್ಟರ್‌ನ ಶೀತಲೀಕರಣ (Cooling) ಮತ್ತು ಲೂಬ್ರಿಕೇಶನ್ (Lubrication) ವ್ಯವಸ್ಥೆಗಳ ಸರ್ವಿಸ್ ಮಾಡುವುದು.

ಇಂಟೇಕ್ (Intake) ಮತ್ತು ಎಕ್ಸಾಸ್ಟ್ (Exhaust) ವ್ಯವಸ್ಥೆಗಳ ಸರ್ವಿಸ್ ಮಾಡುವುದು.

ಇಂಧನ ಪೂರೈಕೆ (Fuel Feed) ವ್ಯವಸ್ಥೆಯನ್ನು ಸರ್ವಿಸ್ ಮಾಡುವುದು.

ಕಾರ್ಯಾಗಾರದಲ್ಲಿ ಕ್ಲಚ್ (Clutch) ಮತ್ತು ಗೇರ್ ಬಾಕ್ಸ್ (Gearbox) ಅನ್ನು ದುರಸ್ತಿ ಮಾಡುವುದು.

ಡಿಫರೆನ್ಷಿಯಲ್ (Differential) ಮತ್ತು ಪಿಟಿಒ (PTO ? Power Take Off) ಘಟಕಗಳನ್ನು ದುರಸ್ತಿ ಮಾಡುವುದು. ವಿದ್ಯಾರ್ಹತೆ 10 ನೇ ತರಗತಿ ಉತ್ತೀರ್ಣ

1ನೇ ಪುಟದಿಂದ....

ಸಜ್ಜನಿಕೆಯ ರಾಜ್ಯಕಾರಣಿಯಾಗಿ ಗುರುತಿಸಿಕೊಂಡಿದ್ದಾರೆ. ಆದ್ದರಿಂದ ಈಗಾಗಲೇ ರಾಜ್ಯದ ನೂತನ ಸಿಎಂ ಆಗಿ ಡಿ.ಕೆ.ಶಿವಕುಮಾರ ಪಟ್ಟಾಭಿಷೇಕ ಮಾಡಿಕೊಳ್ಳುವ ಜೊತೆಗೆ ಕೆಲವರಿಗೆ ಮೊದಲ ಹಂತದ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ಕಲ್ಪಿಸಿದ್ದಾರೆ. ಅದರಂತೆಯೇ ಎರಡನೇ ಹಂತದ ಸಚಿವ ಸಂಪುಟದಲ್ಲಿ ಕಡ್ಡಾಯವಾಗಿ ಶಾಸಕ ಜೆ.ಎನ್.ಗಣೇಶ್‌ಗೆ ಸಚಿವ ಸ್ಥಾನ ನೀಡಬೇಕು. ಒಂದು ವೇಳೆ ಕಾಂಗ್ರೆಸ್ ಪಕ್ಷವು ಇವರನ್ನು ಗುರುತಿಸದೇ ಇದ್ದಲ್ಲಿ, ಬಳ್ಳಾರಿ, ವಿಜಯನಗರ ಜಿಲ್ಲೆ ಒಳಗೊಂಡಂತೆ ಉತ್ತರ ಕರ್ನಾಟಕದ ಬಹು ಜಿಲ್ಲೆಗಳಲ್ಲಿ ಅತಿ ಹೆಚ್ಚಿನ ಮತಗಳನ್ನು ಹೊಂದಿರುವ ವಾಲ್ಮೀಕಿ ನಾಯಕ, ಮುಸ್ಲಿಂ, ಹಿಂದುಳಿದ ವರ್ಗಗಳ ಮತಗಳನ್ನು ಪಕ್ಷ ಕಳೆದುಕೊಳ್ಳುತ್ತದೆ ಎಂದು ಎಚ್ಚರಿಸಿದರು.


ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಶಹಾಪುರ–ಹತ್ತೀಗೂಡೂರು ಲಿಂಗಸುಗೂರು NH–150೦ ರಸ್ತೆ ಅಗಲೀಕರಣಕ್ಕೆ ಕೇಂದ್ರ ಸರ್ಕಾರದ ಸಕಾರಾತ್ಮಕ ಸ್ಪಂದನೆ – ಸಂಸದ ಜಿ ಕುಮಾರ್ ನಾಯಕ

❑ ನೈಜ್ಯ ದೆಸೆ ನ್ಯೂಸ್

**ಶಹಾಪುರ: ಹತ್ತೀಗೂಡೂರು?ಲಿಂಗಸುಗೂರು ಮಾರ್ಗದ ರಾಷ್ಟ್ರೀಯ ಹೆದ್ದಾರಿ–150೦ (ಓಊ–150೦) ರಸ್ತೆಯಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆ ಹಾಗೂ ಸರಣಿ ಅಪಘಾತಗಳಿಂದ ಸಾರ್ವಜನಿಕರ ಜೀವ ಮತ್ತು ಆಸ್ತಿಗೆ ಅಪಾಯ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ, ಈ ರಸ್ತೆಯನ್ನು ತುರ್ತಾಗಿ ಅಗಲೀಕರಣಗೊಳಿಸುವಂತೆ ಸಂಸದರಾದ ಜಿ. ಕುಮಾರ್ ನಾಯಕ ಅವರು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಕಾರ್ಯದರ್ಶಿಗಳಾದ ವಿ. ಉಮಾಶಂಕರ್ ಅವರಿಗೆ ಮನವಿ ಸಲ್ಲಿಸಿದ್ದರು.**

ಸಂಸದರ ಮನವಿಗೆ ಸಚಿವಾಲಯವು ತ್ವರಿತ ಹಾಗೂ ಸಕಾರಾತ್ಮಕ ಸ್ಪಂದನೆ ನೀಡಿದ್ದು, ರಾಷ್ಟ್ರೀಯ ಹೆದ್ದಾರಿ–150೦ ರಸ್ತೆಯ ಅಗಲೀಕರಣಕ್ಕಾಗಿ ಅಗತ್ಯವಾದ ವಿಸ್ತೃತ ಯೋಜನಾ ವರದಿ (ಆಕಖ) ಸಿದ್ಧಪಡಿಸುವ ಪ್ರಕ್ರಿಯೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆರಂಭಿಸಿದೆ. ಈ ಬೆಳವಣಿಗೆ ಈ ಭಾಗದ ಜನರ ಬಹುಕಾಲದ ಬೇಡಿಕೆಗೆ ಮಹತ್ವದ ಉತ್ತರವನ್ನೇ ನೀಡಿದಂತಾಗಿದೆ.



ಓಊ–150೦ ರಸ್ತೆ ಕಲ್ಯಾಣ ಕರ್ನಾಟಕ ಭಾಗದ ಪ್ರಮುಖ ಸಂಪರ್ಕ ಮಾರ್ಗವಾಗಿದ್ದು, ವ್ಯಾಪಾರ, ಕೃಷಿ, ಶಿಕ್ಷಣ, ಆರೋಗ್ಯ ಹಾಗೂ ಇತರೆ ಅಗತ್ಯ ಸೇವೆಗಳಿಗಾಗಿ ಸಾವಿರಾರು ಜನರು ಪ್ರತಿದಿನ ಈ ರಸ್ತೆಯನ್ನು ಅವಲಂಬಿಸಿದ್ದಾರೆ. ಆದರೆ ರಸ್ತೆ ಇಕ್ಕಟ್ಟಾಗಿರುವುದರಿಂದ ಅಪಘಾತಗಳ ಸಂಖ್ಯೆ ಹೆಚ್ಚುತ್ತಿದ್ದು, ಸಾರ್ವಜನಿಕರು ಹಾಗೂ ವಿವಿಧ ಸಂಘಟನೆಗಳು ಹಲವು ವರ್ಷಗಳಿಂದ ರಸ್ತೆ ಅಗಲೀಕರಣಕ್ಕೆ ಆಗ್ರಹಿಸುತ್ತಿದ್ದರು.

ಡಿಪಿಆರ್ ಸಿದ್ಧಪಡಿಸುವ ಕಾರ್ಯ ಆರಂಭವಾಗಿರುವುದು ಯೋಜನೆ ಅನುಷ್ಠಾನದತ್ತ ಮಹತ್ವದ ಹೆಜ್ಜೆಯಾಗಿದ್ದು, ಮುಂದಿನ ದಿನಗಳಲ್ಲಿ ಅಗತ್ಯ ಆಡಳಿತಾತ್ಮಕ ಹಾಗೂ ಆರ್ಥಿಕ ಅನುಮೋದನೆಗಳು ದೊರೆತು ಕಾಮಗಾರಿ ಶೀಘ್ರ ಆರಂಭವಾಗುವ ನಿರೀಕ್ಷೆಯಿದೆ. ರಸ್ತೆ ಅಗಲೀಕರಣ ಪೂರ್ಣಗೊಂಡ ಬಳಿಕ ಸಂಚಾರ ಸುರಕ್ಷತೆ ಹೆಚ್ಚುವುದರ ಜೊತೆಗೆ ವಾಹನಗಳ ಸುಗಮ ಸಂಚಾರಕ್ಕೆ ಅವಕಾಶ ದೊರೆಯಲಿದ್ದು, ಪ್ರಾದೇಶಿಕ ಅಭಿವೃದ್ಧಿಗೂ ಹೆಚ್ಚಿನ ಉತ್ತೇಜನ ಸಿಗಲಿದೆ.

ಜನರ ಹಿತದೃಷ್ಟಿಯಿಂದ ಮನವಿಯನ್ನು ಪರಿಗಣಿಸಿ ಅಗತ್ಯ ಕ್ರಮ ಕೈಗೊಂಡ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಅಧಿಕಾರಿಗಳಿಗೆ ಹಾಗೂ ಕಾರ್ಯದರ್ಶಿಗಳಾದ ಶ್ರೀ ವಿ. ಉಮಾಶಂಕರ್ ಅವರಿಗೆ ಸಂಸದ ಜಿ. ಕುಮಾರ್ ನಾಯಕ ಅವರು ಕೃತಜ್ಞತೆ ಸಲ್ಲಿಸಿದ್ದಾರೆ. ಈ ಯೋಜನೆ ಶೀಘ್ರ ಜಾರಿಯಾಗಿ ಜನರ ಬಹುದಿನಗಳ ಕನಸು ನನಸಾಗಲಿ ಎಂಬುದು ಎಲ್ಲರ ಆಶಯವಾಗಿದೆ.

## ವಿಮುಕ್ತ ದೇವದಾಸಿಯರ ಗಣತಿ ಸಮರ್ಪಕ ನಡೆಸಿ : ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಪದಾಧಿಕಾರಿಗಳ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ವಿಮುಕ್ತ ದೇವದಾಸಿಯರು ಮತ್ತು ಅವರ ಮೂರು ತಲೆಮಾರುಗಳ ಗಣತಿ ಸಮರ್ಪಕವಾಗಿ ನಡೆಸುವಂತೆ ಆಗ್ರಹಿಸಿ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಪದಾಧಿಕಾರಿಗಳು ತಹಸೀಲ್ದಾರ್ ಜೂಗಲ ಮಂಜುನಾಯಕಗೆ ಗುರುವಾರ ಮನವಿ ಸಲ್ಲಿಸಿದರು.**

ತಾಲೂಕು ಅಧ್ಯಕ್ಷೆ ಪಾರ್ವತಿ, ಜಿಲ್ಲಾ ಕಾರ್ಯದರ್ಶಿ ಎ.ಸ್ವಾಮಿ ಮಾತನಾಡಿ, 2007–08ರ ಗಣತಿಯಲ್ಲಿ ರಾಜ್ಯದ 46,800 ವಿಮುಕ್ತ ದೇವದಾಸಿಯರನ್ನು ಗುರುತಿಸಿದ್ದು, 20 ಸಾವಿರಕ್ಕೂ ಅಧಿಕ ವಿಮುಕ್ತ ದೇವದಾಸಿಯರು ಆಗ ಹೊರಗುಳಿದಿದ್ದರು. ಸದ್ಯದ ಗಣತಿಯಲ್ಲಿ 23,385 ವಿಮುಕ್ತ



ದೇವದಾಸಿಯರನ್ನು ಮಾತ್ರ ಗುರುತಿಸಲಾಗಿದೆ.

ಈ ಮುಂಚೆ ನಡೆಸಿದ ಗಣತಿ ದೋಷದಿಂದ ಕೂಡಿದೆ. ಪಟ್ಟಿಯಲ್ಲಿ ಇಲ್ಲದ ವಿಮುಕ್ತ ದೇವದಾಸಿಯರ ಗಣತಿ ಮಾಡಬೇಕು ಕೂಡಲೇ ಬಾಕಿ ಪಿಂಚಣಿ ಬಿಡುಗಡೆಗೊಳಿಸಿ ಹಾಗೂ ಮಕ್ಕಳ ಶಿಕ್ಷಣಕ್ಕೆ ತಾಯಿಯ ದೇವದಾಸಿ ದೃಢೀಕರಣ ಪತ್ರನೀಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪದಾಧಿಕಾರಿಗಳಾದ ತಾಯಮ್ಮ, ಲಕ್ಷ್ಮೀದೇವಿ, ಗಂಗಮ್ಮ, ಮರಿಯಮ್ಮ, ಹೊನ್ನೂರಮ್ಮ, ಹುಲಿಗೆಮ್ಮ, ಶಿವಮ್ಮ, ರಾಜ್ಯ ದೇವದಾಸಿ ಮಹಿಳೆಯರ–ಮಕ್ಕಳ ಹೋರಾಟ ಸಮಿತಿ ತಾಲೂಕು ಕಾರ್ಯದರ್ಶಿ ರಾಮು, ಓಬಳೇಶ ಸೇರಿದಂತೆ ಇತರರಿದ್ದರು.

ವರದಿ : ಜಿಲಾನಸಾಬ್ ಬಡಿಗೇರ್

## ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೆ ಹಾಲು, ಹಣ್ಣು, ಬ್ರೆಡ್ ವಿತರಣೆ



❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಜನಪ್ರಿಯ ಶಾಸಕ ಜೆ.ಎನ್. ಗಣೇಶ ಜನ್ಮದಿನದ ಅಂಗವಾಗಿ ಕಂಪ್ಲಿ ಬ್ಲಾಕ್ ಕಾಂಗ್ರೆಸ್ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪಟ್ಟಣದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಹಾಲು, ಹಣ್ಣು, ಬ್ರೆಡ್ ಶುಕ್ರವಾರ ವಿತರಿಸಲಾಯಿತು.**

ನಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಶ್ರೀನಿವಾಸರಾವ್ ಮಾತನಾಡಿ, ಕಂಪ್ಲಿ ಕ್ಷೇತ್ರದಲ್ಲಿ ರಸ್ತೆ, ಬೀದಿ ದೀಪ, ಕುಡಿಯುವ ನೀರು ಸೇರಿದಂತೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳೊಂದಿಗೆ ಕ್ಷೇತ್ರದ ಜನರ ಮನೆ ಮಾತಾಗಿದ್ದಾರೆ. ಆದ್ದರಿಂದ ಇವರ ಜನ್ಮದಿನದ ಅಂಗವಾಗಿ ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಾಲು, ಹಣ್ಣು, ಬ್ರೆಡ್ ವಿತರಿಸಲಾಯಿತು. ಶಾಸಕರಿಗೆ ಮುಂದಿನ ದಿನದಲ್ಲಿ ಸಚಿವ ಸ್ಥಾನ ಸಿಗುವ ಜೊತೆಗೆ ಆರೋಗ್ಯ, ಆಯಸ್ಸು ವೃದ್ಧಿಸಲಿ ಎಂದರು.

ಪ್ರಧಾನ ಕಾರ್ಯದರ್ಶಿ ವಾಲ್ಮೀಕಿ ರಘುನಾಯಕ ಮತ್ತು ಪುರಸಭೆ ಮಾಜಿ ಸದಸ್ಯ ವೀರಾಂಜಿನೇಯಲು ಮಾತನಾಡಿ, ಶಾಸಕ ಗಣೇಶ್ ಅವರ ಸಾಕಷ್ಟು ಅಭಿವೃದ್ಧಿ ಕಾರ್ಯಗಳ ಮೂಲಕ ಮೂಲಸೌಕರ್ಯ ಕಲ್ಪಿಸಿದ ಹಿನ್ನಲೆ ಕ್ಷೇತ್ರದ ಜನರು ನೆಮ್ಮದಿಯ ಬದುಕು ಸಾಗಿಸುತ್ತಿದ್ದಾರೆ.

ಶಾಸಕರ ಸೇವೆಗಳು ಅನನ್ಯವಾಗಿವೆ. ಕಾಂಗ್ರೆಸ್ ಶಿಸ್ತಿನ ಸಿಪಾಯಿಯಾಗಿ ಶ್ರಮಿಸುತ್ತಿರುವ ಜೆ.ಎನ್.ಗಣೇಶ್‌ಗೆ ಎರಡನೇ ಹಂತದ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದರು. ಇಲ್ಲಿನ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ಪರಿಸರ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ಎನ್.ಹಬೀಬ್ ರೆಹಮಾನ್, ವೈದ್ಯಾಧಿಕಾರಿ ಡಾ.ರವೀಂದ್ರ ಕನಿಕೇರಿ, ಮುಖಂಡರಾದ ಬಿ.ಸಿದ್ದಪ್ಪ, ಭಟ್ಟ ಪ್ರಸಾದ್, ಕೆ.ಷಣ್ಮುಕಪ್ಪ, ಸಿ.ಆರ್.ಹನುಮಂತ, ಎಲ್.ರಾಮನಾಯ್ಡು, ಕೆ.ಎಸ್.ಚಾಂದ್‌ಬಾಷಾ, ಎಂ.ಉಸ್ಮಾನ್, ಜಾಫರ್ ಸೇರಿದಂತೆ ಅನೇಕರಿದ್ದರು.

## ಕಂಪ್ಲಿ ವಾಸವಿ ಯುವಜನ ಸಂಘದ ನೂತನ ಅಧ್ಯಕ್ಷರಾಗಿ ಎನ್.ತಿರುಮಲೇಶ ಅಧಿಕಾರ ಪದಗ್ರಹಣ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಸಮಾಜದ ಕೆಲಸ ದೇವರ ಕೆಲಸ ಎಂಬಂತೆ ವಾಸವಿ ಯುವಜನ ಸಂಘದ ನೂತನ ಪದಾಧಿಕಾರಿಗಳು ಸಮಾಜದ ಅಭಿವೃದ್ಧಿಗೆ ಎಲ್ಲರೂ ಒಟ್ಟಾಗಿ ಶ್ರಮಿಸುವ ಜೊತೆಗೆ ಇನ್ನಿತರ ಸಮಾಜ ಸೇವೆಗಳಿಗೆ ಮುಂದಾಗಬೇಕು ಎಂದು ಕರ್ನಾಟಕ ರಾಜ್ಯ ಆರ್ಯವೈಶ್ಯ ಯುವಜನ ಸಂಘದ ರಾಜ್ಯಾಧ್ಯಕ್ಷ ಭೀಮ್‌ರಾಜ್ ಗಂಗಾವತಿ ಅಭಿಪ್ರಾಯ ವ್ಯಕ್ತಪಡಿಸಿದರು.**

ಕಂಪ್ಲಿ ವಾಸವಿ ಯುವಜನ ಸಂಘದಿಂದ ಸಮೀಪದ ಆನೆಗುಂದಿಯ ಅಂಜನಾದ್ರಿ ಬಳಿಯ ಹನುಮನಹಳ್ಳಿಯ ಹಂಪಿ ಡೆಲ್‌ಮೌಂಟ್ ರೆಸಾರ್ಟ್‌ನಲ್ಲಿ ಆಯೋಜಿಸಿದ್ದ 2026–28ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿ, ಸಮಾಜದ ಅಭಿವೃದ್ಧಿ ಜೊತೆಗೆ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಒಳ್ಳೆಯ ಸಂಸ್ಕಾರ, ಶಿಸ್ತು, ಸಂಯಮ ಕಲಿಸುವುದು ಕೂಡ





ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ವಾಸವಿ ಯುವಜನ ಸಂಘದ ನೂತನ ಅಧ್ಯಕ್ಷ ಎನ್.ತಿರುಮಲೇಶ ಅಧಿಕಾರ ಸ್ವೀಕರಿಸಿ ಮಾತನಾಡಿ, ಯುವಜನ ಸಂಘವೂ ನಮ್ಮನ್ನು ಗುರುತಿಸಿ, ಕಂಪ್ಲಿ ಅಧ್ಯಕ್ಷರನ್ನಾಗಿ ಮಾಡಿರುವುದು ಖುಷಿಯಾಗಿದ್ದು, ಈ ಜವಾಬ್ದಾರಿಗೆ ತಕ್ಕಂತೆ ಕೆಲಸ ಮಾಡಲಾಗುವುದು. ಆರ್ಯವೈಶ್ಯ ಮತ್ತು ವಾಸವಿ ಯುವಜನ ಸಂಘದ ಪದಾಧಿಕಾರಿಗಳ ಸಹಕಾರದೊಂದಿಗೆ ಮತ್ತು ಸ್ಥಳೀಯ ಮುಖಂಡರ ಮಾರ್ಗದರ್ಶನದಲ್ಲಿ ಸಮಾಜದ ಏಳಿಗೆಗೆ ಮತ್ತು ಇನ್ನಿತರ ಸಮಾಜ ಸೇವೆಗೆ ನಿರಂತರವಾಗಿ ಶ್ರಮಿಸಲಾಗುವುದು ಎಂದರು. ವಾಸವಿ ಯುವಜನ ಸಂಘದ ನಿಕಟಪೂರ್ವ ಅಧ್ಯಕ್ಷ ಡಿ.ಮಂಜೇಶ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು.

ನಂತರ ನೂತನ ಅಧ್ಯಕ್ಷ ಮತ್ತು ಪದಾಧಿಕಾರಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಬದಲ್ಲಿ ಆರ್ಯವೈಶ್ಯ ಯುವಜನ ಮಹಾಸಭಾದ ರಾಜ್ಯ ಸಹ ಕಾರ್ಯದರ್ಶಿ ಕೆ.ಜಗದೀಶ, ಆರ್ಯವೈಶ್ಯ ಸಂಘದ ಧರ್ಮಕರ್ತ ವೈ.ಚಂದ್ರಮೋಹನ ಶ್ರೇಷ್ಠಿ, ಕಂಪ್ಲಿ ಆರ್ಯವೈಶ್ಯ ಸಂಘದ ಅಧ್ಯಕ್ಷ ಡಿ.ವಿ.ಸುಬ್ಬರಾವ್, ವಾಸವಿ ಕಲ್ಯಾಣ ಮಂಟಪ ಅಭಿವೃದ್ಧಿ ಸಮಿತಿ ಅಧ್ಯಕ್ಷ ಜಿ.ಬಿ.ಕೋಟೇಶ್ವರ್, ವಾಸವಿ ಮಹಿಳಾ ಮಂಡಳಿ ಅಧ್ಯಕ್ಷೆ ಟಿ.ರಮಾದೇವಿ, ವಾಸವಿ ವಿದ್ಯಾಸಂಸ್ಥೆ ಅಧ್ಯಕ್ಷ ಜಿ.ರಾಜಾರಾವು ಸೇರಿದಂತೆ ಅನೇಕರಿದ್ದರು.

ಪದಗ್ರಹಣ: ಇಲ್ಲಿನ ಪದಗ್ರಹಣ ಕಾರ್ಯಕ್ರಮದಲ್ಲಿ ನೂತನ ಅಧ್ಯಕ್ಷರಾಗಿ ಎನ್.ತಿರುಮಲೇಶ, ಉಪಾಧ್ಯಕ್ಷರಾಗಿ ಎಂ.ಸಂದೀಪ್, ಸಿ.ಸುನೀಲ್ ಕುಮಾರ, ಮಾಧ್ಯಮ ಸಲಹೆಗಾರರಾಗಿ ಕೆ.ಜಗದೀಶ ಸೇರಿದಂತೆ ಪದಾಧಿಕಾರಿಗಳು, ಸದಸ್ಯರು ಸರ್ವಾನುಮತದಿಂದ ಆಯ್ಕೆಗೊಂಡು ಪದಗ್ರಹಣ ಮಾಡಿದರು.

## ಖಾತೆ ಹಂಚಿಕೆ ಕುರಿತು ಡಿಕೆ ಸರ್ಕಾರದಲ್ಲಿ ಭುಗಿಲೆದ್ದ ಅಸಮಾಧಾನ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ನೂತನ ಸರ್ಕಾರದಲ್ಲಿ ಖಾತೆ ಕ್ಯಾತೆ ಹಾಗೂ ಸಂಪುಟದಲ್ಲಿನ ಅವಕಾಶ ವಂಚಿತರ ಅಸಮಾಧಾನ, ಆಕ್ರೋಶಗಳೇ ಹೆಚ್ಚು ಚರ್ಚೆಯಾಗುತ್ತಿದ್ದು, ಶೀಘ್ರದಲ್ಲೇ ಖಾತೆಗಳ ಮರು ಹಂಚಿಕೆಯಾಗುವ ಸಾಧ್ಯತೆ ಇದೆ.**

ಚುನಾವಣೆ ಸುದ್ದಿ ನವೀಕರಣಗಳು ರಾಮಲಿಂಗಾರೆಡ್ಡಿ ರಾಜೀನಾಮೆ ನೀಡಿದ ಬೆನ್ನಲ್ಲೇ ಹಿರಿಯ ಸಚಿವರಾದ ಕೆ.ಎಚ್.ಮುನಿಯಪ್ಪ, ಕೆ.ಜೆ.ಜಾರ್ಜ್ ಹಾಗೂ ಸಿದ್ದರಾಮಯ್ಯ ಅವರ ಆಪ್ತ ಭೈರತಿಸುರೇಶ್ ಖಾತೆ ಹಂಚಿಕೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ಬದಲಾವಣೆಗೆ ಪಟ್ಟು ಹಿಡಿದಿದ್ದಾರೆ. ಜಲ ಸಂಪನ್ಮೂಲ ಸಚಿವರಾಗಿದ್ದ ರಾಮಲಿಂಗಾರೆಡ್ಡಿ ಬೆಂಗಳೂರು ನಗರಾಭಿವೃದ್ಧಿ ಖಾತೆಗೆ ಪಟ್ಟು ಹಿಡಿದು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರೆ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ತಮಗೆ ಬೇರೆ ಖಾತೆ ನೀಡಬೇಕೆಂದು ಪಟ್ಟು ಹಿಡಿದಿದ್ದಾರೆ.

ಸಾರಿಗೆ ಸಚಿವ ಭೈರತಿ ಸುರೇಶ್ ವಸತಿ





ಖಾತೆಗಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೂಲಕ ಒತ್ತಡ ಹೇರುತ್ತಿದ್ದಾರೆ. ಇಂಧನ ಹಾಗೂ ಪ್ರವಾಸೋದ್ಯಮ ಸಚಿವರಾಗಿರುವ ಕೆ.ಜೆ.ಜಾರ್ಜ್ ಅಧಿಕಾರಿಗಳ ನೇಮಕದ ವಿಚಾರವಾಗಿ ಅಸಹನೆ ಹೊಂದಿದ್ದು, ಬದಲಾವಣೆ ಮಾಡದೇ ಇದ್ದರೆ, ರಾಜೀನಾಮೆ ನೀಡುವುದಾಗಿ ಸಂದೇಶ ರವಾನಿಸಿದ್ದಾರೆ ಎನ್ನಲಾಗಿದೆ.

ಈ ಹಿಂದೆ ಕೇಂದ್ರ ಬೆಂಗಳೂರು ಪಾಲಿಕೆ ಆಯುಕ್ತರಾಗಿದ್ದ ರಾಜೇಂದ್ರ ಚೋಳನ್ ಅವರನ್ನು ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಿದ್ದಂತೆ ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾವಣೆ ಮಾಡಿದರು. ಹೆಚ್ಚುವರಿಯಾಗಿ ಮುಖ್ಯಮಂತ್ರಿಯವರ ಕಾರ್ಯದರ್ಶಿ ಹುದ್ದೆಯ ಜವಾಬ್ದಾರಿಯನ್ನು ವಹಿಸಿದ್ದರು. ತಮಗೆ ಇಂಧನ ಖಾತೆ ದೊರೆಯುತ್ತಿದ್ದಂತೆ ಅದರ ಅಧೀನದಲ್ಲಿರುವ ಕೆಪಿಟಿಸಿಎಲ್‌ಗೆ ಅಧಿಕಾರಿಯನ್ನು ಬದಲಾವಣೆ ಮಾಡಬೇಕೆಂಬುದು ಜಾರ್ಜ್ ಅವರ ಬಿಗಿ ಪಟ್ಟಾಗಿದೆ. ಈ ಮೊದಲಿನ ವ್ಯವಸ್ಥಾಪಕ ನಿರ್ದೇಶಕ ಗೌರವ್ ಗುಪ್ತ ಜಾರ್ಜ್ ಅವರೊಂದಿಗೆ ಉತ್ತಮ ಸೌಹಾರ್ದತೆ ಹೊಂದಿದ್ದರು ಎನ್ನಲಾಗಿದೆ.

ಮೊದಲ ಹಂತದಲ್ಲಿ ಡಿ.ಕೆ.ಶಿವಕುಮಾರ್ ಅವರ ನೂತನ ಸಂಪುಟಕ್ಕೆ ಒಂದು ಉಪ ಮುಖ್ಯಮಂತ್ರಿ ಹಾಗೂ 12 ಸಚಿವರ ನೇಮಕವಾಗಿ ಖಾತೆಗಳು ಹಂಚಿಕೆಯಾಗಿವೆ. ಡಿ.ಕೆ.ಶಿವಕುಮಾರ್ ಅವರು ತಮ ಬಳಿ ಹಣಕಾಸು, ಗುಪ್ತಚರ ಸೇರಿದಂತೆ ಹಂಚಿಕೆಯಾಗದೇ ಉಳಿದ ಎಲ್ಲಾ ಖಾತೆಗಳನ್ನು ಉಳಿಸಿಕೊಂಡಿದ್ದಾರೆ. ಉಪ ಮುಖ್ಯಮಂತ್ರಿಯಾಗಿರುವ ಡಾ.ಜಿ.ಪರಮೇಶ್ವರ್ ಅವರಿಗೆ ಕಂದಾಯದ ಜೊತೆಗೆ ಕ್ರೀಡಾ ಇಲಾಖೆ ನೀಡಲಾಗಿದೆ. ಕೆ.ಎಚ್.ಮುನಿಯಪ್ಪ ಅವರಿಗೆ ಈ ಹಿಂದೆ ನೀಡಲಾಗಿದ್ದ ಆಹಾರ ಮತ್ತು ನಾಗರಿಕ ಪೂರೈಕೆ ಹಾಗೂ ಕೆ.ಜೆ. ಜಾರ್ಜ್ ಅವರಿಗೆ ಇಂಧನ, ಪ್ರವಾಸೋದ್ಯಮ ಖಾತೆ ನೀಡಲಾಗಿದೆ. ಎಂ.ಬಿ.ಪಾಟೀಲ್ ಅವರಿಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸತೀಶ್ ಜಾರಕಿಹೊಳಿಯವರಿಗೆ ಲೋಕೋಪಯೋಗಿ, ಶರಣಪ್ರಕಾಶ್ ಪಾಟೀಲ್ ಅವರಿಗೆ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿಯನ್ನು ನೀಡಲಾಗಿದೆ. ಈ ಮೂವರು ಸಚಿವರ ಖಾತೆಗಳನ್ನು ಯಥಾರೀತಿ ಮುಂದುವರೆಸಿದ್ದು, ಯಾವುದೇ ಆಕ್ಷೇಪಗಳು ಕಂಡು ಬಂದಿಲ್ಲ. ಬ್ರ್ಯಾಂಡ್ ಬೆಂಗಳೂರು ಕನಸ್ಸನ್ನು ಹೊತ್ತ ಡಿ.ಕೆ.ಶಿವಕುಮಾರ್ ಅವರು, ಕೃಷ್ಣಭೈರೇಗೌಡ ಅವರಿಗೆ ಗ್ರೇಟರ್ ಬೆಂಗಳೂರು ನಗರಾಭಿವೃದ್ಧಿ ನೀಡಿದ್ದಾರೆ. ಪ್ರಿಯಾಂಕ್ ಖರ್ಗೆ ಅವರಿಗೆ ಹಿಂದಿನ ಐಟಿಬಿಟಿ ಜೊತೆಗೆ ಗೃಹ ಇಲಾಖೆ ದೊರಕಿದೆ. ವಿಧಾನಸಭಾಧ್ಯಕ್ಷ ಸ್ಥಾನಕ್ಕೆ ವಿದಾಯ ಹೇಳಿದ ಸಚಿವರಾದ ಯು.ಟಿ.ಖಾದರ್‌ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ನೀಡಲಾಗಿದೆ. ಈಶ್ವರ್ ಖಂಡ್ರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಪಡೆದಿದ್ದಾರೆ. ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಅವರಿಗೆ ನಗರಾಭಿವೃದ್ಧಿ ನೀಡಲಾಗಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101